ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 7 ಫೆಬ್ರವರಿ 15, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ಮುಂದಿನ ಸಂಚಿಕೆಯಲ್ಲಿ

ಆಫ್‌ಘಾನಿಸ್ತಾನದಲ್ಲಿ ಹೆಚ್ಚಿದ ಆತ್ಮಸ್ಥೈರ್ಯ ಹಾಗೂ ಕದನ ವಿರಾಮ

ಬಾಬ್ರಿ ಮಸೀದಿ ಸಮಸ್ಯೆ ಇಲ್ಲಿಗೆ ಮುಗಿಯಿತೆ ?

– ಬಿ. ಟಿ. ರಣದಿವೆ

ಗಣತಂತ್ರ ದಿನಾಚರಣೆಯ ಬಹಿಷ್ಕಾರದ ಕರೆ ನೀಡಿದ ಕೆಲವು ಮುಸ್ಲಿಂ ಕೋಮುವಾದಿ ಮುಖಂಡರು ಅದನ್ನು ಹಿಂತೆಗೆದುಕೊಂಡಿರುವುದರಿಂದ ಸಮಾಧಾನದ ನಿಟ್ಟುಸಿರು ಬಿಡುವಂತಾಗಿರಬಹುದು. ಆದರೆ ಸಮಸ್ಯೆ ಇಲ್ಲಿಗೇ ಮುಗಿಯಲ್ಲಿ. ಸದ್ಯದಲ್ಲೇ ಮುಸ್ಲಿಂ ಬಂದ್ ಇತ್ಯಾದಿ ಕರೆ ಬಂದು ಅದು ಸ್ಫೋಟಗೊಳ್ಳುವ ಸಾಧ್ಯತೆಯಿದ್ದೇ ಇದೆ. ರಾಜೀವ್ ಗಾಂಧಿಯವರು ಶಾಬಾನು ತೀರ್ಪಿನ ಸಂದರ್ಭದಲ್ಲಿ ಯಾರನ್ನು ಓಲೈಸಿಕೊಳ್ಳಲು ಪ್ರಯತ್ನಿಸಿದ್ದರೊ, ಮುಸ್ಲಿಂ ಕೋಮಿನ ಮುಖಂಡರೆಂದು ಸರ್ಟಿಫಿಕೇಟ್ ನೀಡಿದ್ದರೋ ಅದೇ ಮುಖಂಡರಿವರು. ಆ ಸರ್ಟಿಫಿಕೇಟ್‌ನ್ನು ಅವರೀಗ ಬಳಸಿಕೊಳ್ಳುತ್ತಿದ್ದಾರೆ. ಸದ್ಯ ತಮ್ಮ ರಾಷ್ಟ್ರ ವಿರೋಧಿ ಹಾಗೂ ತಮಗೆ ತಿಳಿಯದೇನೇ ಸಾಮ್ರಾಜ್ಯಶಾಹಿಗಳ ತಂತ್ರಗಳಿಗೆ ನೆರವಾಗುವ ತಮ್ಮ ಕರೆಯನ್ನು ದೇಶದಲ್ಲೆಡೆಯಿಂದ, ಮುಸ್ಲಿಂ ದೇಶಪ್ರೇಮಿಗಳಿಂದಲೂ ಬಂದ ಖಂಡನೆಗಳಿಗೆ ಹೆದರಿ ಹಿಂತೆಗೆದುಕೊಂಡಿದ್ದರೂ, ಮೂಲಭೂತ ಸಮಸ್ಯೆಯ ಬಗ್ಗೆ ಅವರು ಮರುಚಿಂತನೆ ಮಾಡುವಂತೆ ಕಾಣಿಸುತ್ತಿಲ್ಲ.

ಅದೇನೆ ಇರಲಿ ದೇಶದ ಐಕ್ಯತೆಗಾಗಿ ಹೋರಾಡುವವರಿಗೆ ಈ ಕೆಲವು ಮುಖಂಡರ ತಿಪ್ಪರಲಾಗಕ್ಕಿಂತ ಮುಖ್ಯವಾದದ್ದು ಮುಸ್ಲಿಂ ಜನಸಾಮಾನ್ಯರ ಭಾವನೆ. ಕರೆಯನ್ನು ಹಿಂತೆಗೆದುಕೊಂಡುದರಿಂದ ಅವರಲ್ಲಿ ಐಕ್ಯತೆಯ ಭಾವನೆ ಉಂಟಾಗಿದೆಯೇ? ಇಲ್ಲ. ಹಿಂತೆಗೆದುಕೊಳ್ಳುವಂತೆ ಒತ್ತಡ ಹೇರಿದ ರೀತಿ ಅವರನ್ನು ಇನ್ನಷ್ಟು ಖಿನ್ನಗೊಳಿಸಿದೆ. ಮುಂದೊಮ್ಮೆ ಅವರು ಇನ್ನೂ ಹೆಚ್ಚು ಧರ್ಮಾಂಧವಾದ ಮುಖಂಡತ್ವಕ್ಕೆ ಬೆಂಬಲ ನೀಡಿದರೂ ಆಶ್ಚರ್ಯವಿಲ್ಲ.

ಬಹಿಷ್ಕಾರದ ಕರೆಯ ವಿರುದ್ಧ ಪ್ರಚಾರ, ಒತ್ತಡ ಕೆಲವು ಮುಖಂಡರ ಮೇಲಷ್ಟೇ ಕೇಂದ್ರಿಕೃತವಾಗಿತ್ತೇ ಹೊರತು, ಈ ರೀತಿಯ ಪ್ರತಿಭಟನೆ ಏಕೆ ತಪ್ಪು ಎಂದು ಮುಸ್ಲಿಂ ಜನಸಾಮಾನ್ಯರಿಗೆ ವಿವರಿಸುವತ್ತ ಗಮನ ಹರಿಸಲಿಲ್ಲ. ಆದರೆ ಒತ್ತಾಯ ವಿವರಣೆ ಕೊಡಬೇಕಾಗಿದ್ದದು ಇವರಿಗೇನೆ. ಯಾಕೆಂದರೆ ಸಕಾರಣವಾದ ಕೊರಗು ಬಾಧಿಸುತ್ತಿರುವುದು ಇವರನ್ನೇ. ಅವರ ಭಾವನೆಗಳನ್ನು ಸಮಯ ಸಾಧಕ, ಧರ್ಮಾಂಧ ಮುಖಂಡರು ಬಡಿದೆಬ್ಬಿಸಿದ್ದಾರೆ. ರಾಷ್ಟ್ರೀಯ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳು ಮುಸ್ಲಿಂ ಜನಸಾಮಾನ್ಯರಿಗೆ ಅನ್ಯಾಯವಾಗುತ್ತಿದೆ ಎಂಬುದನ್ನು ಒಪ್ಪಿಕೊಂಡು, ಆ ಬಗ್ಗೆ ಸಹಾನುಭೂತಿ ತೋರದೆ ಕೇವಲ ಬಹಿಷ್ಕಾರದ ಕರೆಯನ್ನಷ್ಟೇ ಹಿಂತೆಗೆದು ಕೊಳ್ಳುವಂತೆ ಮಾಡಿರುವುದನ್ನು ಶ್ರೀಸಾಮಾನ್ಯ ಮುಸ್ಲಿಮರು ತಮ್ಮ ಸೋಲೆಂದ ಬಗೆಯುವಂತಾಗಿದೆ.

ಗಣತಂತ್ರ ದಿನಾಚರಣೆಯ ಬಹಿಷ್ಕಾರವನ್ನು ಹಿಂತೆಗೆದುಕೊಂಡಿದ್ದರಿಂದ ಕೆಲವರಿಗೆ ನಿಟ್ಟುಸಿರು ಬಿಡುವಂತಾಗಿರಬಹುದು. ನಮಗೆ ಈ ಮುಖಂಡರ ತಿಪ್ಪರಲಾಗಕ್ಕಿಂತ ಮುಖ್ಯವಾದದ್ದು ಮುಸ್ಲಿಂ ಜನಸಾಮಾನ್ಯರ ಭಾವನೆ. ಅದು ಬದಲಾಗಿದೆಯೇ ?

ಕೋಮುಸೌಹಾರ್ದವನ್ನು ಮೂಡಿಸಿ ರಾಷ್ಟ್ರೀಯ ಐಕ್ಯತೆ ಕಾಪಾಡುವುದು ಮತ್ತು ಧಾರ್ಮಿಕ ನಂಬಿಕೆಗಳನ್ನೂ

[3ನೇ ಪುಟ ನೋಡಿ]

ಒಂದು ಲಕ್ಷ ರೂ ನಿಧಿಗಾಗಿ ಕರೆ

ಪ್ರಥಮಬಾರಿ ಕರ್ನಾಟಕ ರಾಜ್ಯದಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಚುನಾವಣೆಗಳು ನಡೆದಿವೆ. ಈ ಚುನಾವಣೆಯಲ್ಲಿ ಎಷ್ಟೇ ಭ್ರಷ್ಟಾಚಾರ, ಅವ್ಯವಹಾರ, ಅಧಿಕಾರದ ದುರುಪಯೋಗಗಳು ನಡೆದರೂ ಕೂಡ ಅಧಿಕಾರ ವಿಕೇಂದ್ರೀಕರಣದ ಪದ್ಧತಿಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಸ್ವಾಗತಿಸುತ್ತದೆ. ಈ ಚುನಾವಣೆಯಲ್ಲಿ 286 ಪಕ್ಷದ, ರೈತ ಸಂಘದ, ಯುವಜನ ಸಂಘಟನೆಯ ಸದಸ್ಯರು ಗೆದ್ದು ಬಂದಿದ್ದಾರೆ. ಜಿಲ್ಲಾ ಪರಿಷತ್-ಮಂಡಲ ಪಂಚಾಯತ್ ಮಸೂದೆ, ನಿಯಮಗಳನ್ನೂ, ಆ ಸಂಸ್ಥೆಗಳಲ್ಲಿ ನಮ್ಮ ಪ್ರತಿನಿಧಿಗಳು ಯಾವ ರೀತಿ ಕೆಲಸ ಮಾಡಬೇಕು ಎಂಬ ಅಂಶಗಳ ಕುರಿತು ಅವರಿಗೆಲ್ಲ ಹೆಚ್ಚಿನ ತಿಳುವಳಿಕೆ ಕೊಡುವ ವ್ಯವಸ್ಥೆ ಮಾಡಬೇಕು. ಈ ಚುನಾವಣೆಯ ಬೆನ್ನಿನಲ್ಲಿ ರಾಜ್ಯದ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿ ಹೇಳುವುದು, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಬಲಪಡಿಸುವುದು, ಸಾಮೂಹಿಕ ಸಂಘಟನೆಗಳ ಸದಸ್ಯರಲ್ಲಿ ರಾಜಕೀಯ ಜ್ಞಾನ, ತಿಳುವಳಿಕೆ ಬರುವಂತೆ ಮಾಡುವುದು, ಇಂದಿನ ತುರ್ತು ಕರ್ತವ್ಯವೆಂದು ಫೆಬ್ರುವರಿ 8-9 ರಂದು ಸೇರಿದ್ದ ಸಿ. ಪಿ. ಐ. [ಎಂ] ಕರ್ನಾಟಕ ರಾಜ್ಯ ಸಮಿತಿ ಪಕ್ಷದ ಘಟಕಗಳಿಗೆ ಕರೆ ನೀಡಿದೆ.

ಕರ್ನಾಟಕ ರಾಜ್ಯದಲ್ಲಿ ಪಕ್ಷದ ಹಾಗೂ ಸಾಮೂಹಿಕ ಸಂಘಟನೆಗಳ ಚಳುವಳಿ ವಿಸ್ತಾರಗೊಳ್ಳುತ್ತಿದೆ. ಜೊತೆಯಲ್ಲಿಯೇ ಪಟ್ಟಭದ್ರಹಿತಾಸಕ್ತಿಗಳ, ಭಾಷಾಂಧರ, ಧಾರ್ಮಿಕ ಸಂಘ ಸಂಸ್ಥೆಗಳ ಚಟುವಟಿಕೆ ತೀವ್ರಗೊಳ್ಳುತ್ತಿದೆ. ರೈತರ, ಕೃಷಿ ಕಾರ್ಮಿಕರ, ವಿದ್ಯಾರ್ಥಿ ಯುವಜನತೆಯ, ಸಂಘಟಿತ-ಅಸಂಘಟಿತ ಕಾರ್ಮಿಕರ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರ ಗಮನ ಹರಿಸುತ್ತಿಲ್ಲ. ರಾಜ್ಯದ ಕೈಗಾರಿಕಾಭಿವೃದ್ಧಿಗಾಗಿ ಕೇಂದ್ರದಿಂದ ಹೆಚ್ಚು ಧನಸಹಾಯ ಪಡೆಯಲು, ರಾಜ್ಯ ಸರಕಾರ ಎಡ ಪಕ್ಷಗಳ, ಹಾಗೂ ಜನತೆಯ ಬೆಂಬಲದಿಂದ ಕೇಂದ್ರದ ಮೇಲೆ ಒತ್ತಾಯ ತರಲು ಪ್ರಯತ್ನಿಸುತ್ತಿಲ್ಲ.

ನಮ್ಮ ರಾಜ್ಯದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಬಲಿಷ್ಠವಾಗಿ ಬೆಳೆಯಬೇಕಾಗಿದೆ. ಹಾಗಾಗಬೇಕಾದರೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಬಲಗೊಳ್ಳಬೇಕು. ಜನವಿಭಾಗದ ಸಮಸ್ಯೆಗಳಿಗಾಗಿ ಪ್ರಚಾರ-ಪ್ರಕ್ಷೋಭೆ ನಡೆಸಬೇಕು. ಸಾಮೂಹಿಕ ಸಂಘಟನೆಗಳಿಗೆ, ಅವರ ಹೋರಾಟಕ್ಕೆ ಮಾರ್ಗದರ್ಶನ ನೀಡಬೇಕು, ಈ ಎಲ್ಲ ಜವಾಬ್ದಾರಿಗಳನ್ನು ಸಮರ್ಪಕವಾಗಿ ನೆರವೇರಿಸಲು ನಿಧಿ ಅತ್ಯಗತ್ಯ. ಫೆಬ್ರವರಿ 8-9 ರಂದು ಸಭೆ ಸೇರಿದ್ದ ರಾಜ್ಯ ಸಮಿತಿ ಈ ಹೊಣೆಗಾರಿಕೆಯನ್ನು ನಿರ್ವಹಿಸುವ ಸಲುವಾಗಿ ಒಂದು ಲಕ್ಷ ರೂಪಾಯಿ ನಿಧಿ ಸೇರಿಸಬೇಕೆಂದು ನಿರ್ಣಯಿಸಿದೆ. ಪಕ್ಷದ ಎಲ್ಲಾ ಘಟಕಗಳೂ, ಜಿಲ್ಲಾ-ಪ್ರಾದೇಶಿಕ ಸಮಿತಿಗಳೂ ಈ ಕರೆಯನ್ನು ಗಂಭೀರವಾಗಿ ಮನಗಂಡು ಏಪ್ರಿಲ್ ಕೊನೆಯೊಳಗೆ ಪಕ್ಷದ ನಿಧಿಯನ್ನು ಕೂಡಿಸಲಿಕ್ಕೆ ಸರಿಯಾದ ಕಾರ್ಯಕ್ರಮ ಹಮ್ಮಿಕೊಂಡು ತಮ್ಮ ಕ್ರಾಂತಿಕಾರಿ ಕರ್ತವ್ಯವನ್ನು ನಿರ್ವಹಿಸಬೇಕೆಂದು ರಾಜ್ಯ ಸಮಿತಿ ಕೇಳಿಕೊಳ್ಳುತ್ತದೆ.

[8ನೇ ಪುಟ ನೋಡಿ]

'ಹುಕುಂನಾಮೆ'ಗಳ ರಾಜಕೀಯ

– ಪಾಲಿಟ್ ಬ್ಯೂರೋ

ಅಕಾಲಿದಳದ ಹೆಸರಿನಲ್ಲಿರುವ ಎಲ್ಲಾ ಸಿಖ್ ಸಂಘಟನೆಗಳ ಪ್ರಮುಖರು, ಅಧ್ಯಕ್ಷರು ಮತ್ತು ಜೋತೆದಾರರು ತಂತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಬೇಕು ಹಾಗೂ ತಮ್ಮ ಸಂಘಟನೆಗಳನ್ನು ವಿಸರ್ಜಿಸಬೇಕೆಂದು ಐದು ಪ್ರಧಾನ ಸಿಖ್ ಅರ್ಚಕರು ಅಮೃತಸರದಲ್ಲಿ ಸ್ವರ್ಣಮಂದಿರದಿಂದ ನೀಡಿರುವ ಹುಕುಂನಾಮೆ ಪ್ರತ್ಯೇಕತಾವಾದಿಗಳಿಗೂ ಭಯೋತ್ಪಾದಕರಿಗೂ ಪ್ರೋತ್ಸಾಹ ನೀಡುವ ಹೊಸತಂತ್ರವಾಗಿದೆಯೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್ ಬ್ಯೂರೊ ಆರೋಪಿಸಿದೆ.

ದೇಶದ ನಾನಾ ವಿಭಾಗಗಳಲ್ಲಿ ನಡೆಯುತ್ತಿರುವ ಛಿದ್ರಕಾರಿ, ಭಯೋತ್ಪಾದಕ ಚಟುವಟಿಕೆಗಳಿಗೂ, ಪ್ರತ್ಯೇಕ ಖಲಿಸ್ತಾನವಾಗಬೇಕೆಂಬ ಬೇಡಿಕೆಗೂ ಬಹಿರಂಗವಾಗಿಯೇ ಜನವರಿ 26 ಶರಬತ್ ಖಾಲ್ಸಾ ಬೆಂಬಲ ನೀಡುವ ನಿರ್ಣಯ ಕೈಗೊಂಡಿತ್ತು. ಆ ನಿರ್ಣಯವನ್ನ ಕಾರ್ಯರೂಪದಲ್ಲಿ ತರುವ ದುರುದ್ದೇಶದಿಂದಲೇ ಹುಕುಮ್‌ನಾಮೆ ಹೊರಡಿಸಲಾಗಿದೆ. ಪ್ರಜಾಪ್ರಭುತ್ವ ರೀತಿಯಲ್ಲಿ ಚುನಾಯಿಸಲ್ಪಟ್ಟ ಸಿಖ್ಖರ ವ್ಯವಹಾರವನ್ನು ನಡೆಸುತ್ತಿರುವ ಶಿರೋಮಣಿ ಗುರುದ್ವಾರ ಪ್ರಭಂಧಕ ಕಮಿಟಿ [ಎಸ್.ಪಿ.ಜಿ.ಸಿ.] ಅಕಾಲಿದಳಗಳಂಥವುಗಳ ಅಧಿಕಾರವನ್ನು ತಾವೇ ಅತಿಕ್ರಮಿಸಿಕೊಂಡು ಅದನ್ನು ಧರ್ಮದ ಸಲುವಾಗಿ ಉಪಯೋಗಿಸುವ ಕುತಂತ್ರ ಇದಾಗಿದೆ. ಈ ಪ್ರಧಾನ ಅರ್ಚಕರನ್ನು ಯಾರೂ ಆರಿಸಿಲ್ಲ. ತೀವ್ರಗಾಮಿಗಳಿಂದ ಪ್ರಭಾವಿತವಾದ ಶರಬತ್ ಖಾಲ್ಸಾ ಅವರನ್ನು ನಾಮಕರಣ ಮಾಡಿದೆ.

ಎಲ್ಲಾ ಅಕಾಲಿಬಣಗಳ ಏಕತೆಗೆ ದಾರಿಮಾಡಿಕೊಡಲು ಮುಖ್ಯಮಂತ್ರಿ ಸ್ಥಾನಕ್ಕೆ ರಾಜಿನಾಮೆ ನೀಡಿ ಅಕಾಲಿದಳ [ಲೋಂಗೋವಾಲ್] ಅನ್ನು ವಿಸರ್ಜಿಸುವಂತೆ ಅರ್ಚಕರು ನೀಡಿರುವ ಆಜ್ಞೆಯನ್ನು ಬರ್ನಾಲ ಅವರು ತಿರಸ್ಕರಿಸಿದ್ದಾರೆ.

ಈ ಪ್ರಧಾನ ಅರ್ಚಕರನ್ನು ಆರಿಸಿದವರಾರು ? ತೀವ್ರಗಾಮಿಗಳ ಖಾಲ್ಸಾ ಸಭೆಯೊಂದರಲ್ಲಿ ನಾಮಕರಣಗೊಂಡ ಇವರು ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಅಕಾಲಿದಳ, ಗುರುದ್ವಾರ ಪ್ರಭಂಧಕ ಸಮಿತಿಗಳ ಮೇಲೆಹುಕುಂ' ಚಲಾಯಿಸುತ್ತಿದ್ದಾರೆ.

(8ನೇ ಪುಟ ನೋಡಿ)

ಭೂ ಸುಧಾರಣೆಯಿಲ್ಲದೆ ಅಧಿಕಾರ ವಿಕೇಂದ್ರಿಕರಣ ಯಶಸ್ವಿಯಾಗದು

ಕಾ|| ವೆಂಕಟರಾಮಯ್ಯ

ವಿಧಾನ ಮಂಡಲದಲ್ಲಿ

ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪಂಚಾಯತ್ ರಾಜ್ಯದ ಹೊಸ ಮಾದರಿಯನ್ನು ಸ್ಥಾಪಿಸುವಲ್ಲಿ ನನ್ನ ಸರ್ಕಾರವು ವಿಕೇಂದ್ರಿಕೃತ ವ್ಯವಸ್ಥೆಯ ಕಲ್ಪನೆಯಿಂದ ಸ್ಫೂರ್ತಿ ಪಡೆದಿದೆ. ಆಯಾ ಪ್ರದೇಶಗಳಲ್ಲಿ ಸರ್ಕಾರದ ಸೂಕ್ಷ್ಮ ಪ್ರತಿರೂಪವಾಗಿ ಕಾರ್ಯ ನಿರ್ವಹಿಸುವಂತೆ ಜಿಲ್ಲಾ ಪರಿಷತ್‌ಗಳನ್ನು ರೂಪಿಸಲಾಗಿದೆ ಎಂದು ಹೇಳಿದ್ದಾರೆ. ಆದರೆ ಸರಕಾರಕ್ಕೆ ಹೆಗಡೆಯವರ ಥಿಂಕ್ ಟ್ಯಾಂಕ್ ಒಪ್ಪಿಸಿದ ವರದಿಯೊಂದರಲ್ಲಿ ಭೂ ಹಂಚಿಕೆ ಸಮರ್ಪಕವಾಗಿ ಆಗದೆ ಜನತಂತ್ರದಲ್ಲಿ ಜನತೆಯ ಪಾಲುದಾರಿಕೆ ಸಾಧ್ಯವಾಗುವುದಿಲ್ಲ. ಇಂಥ ಆರ್ಥಿಕ ತಾರತಮ್ಯ ಇರುವೆಡೆಯಲ್ಲಿ ಆಸಕ್ತ ಹಿತಗಳ ಕೈ ಮಾತ್ರ ಬಲಗೊಳ್ಳುತ್ತದೆ ಎಂದು ವಿಧಾನ ಸಭೆಯಲ್ಲಿ ಸಿ. ಪಿ. ಐ. (ಎಂ) ಪಕ್ಷದ ನಾಯಕ ಕಾ|| ಆರ್. ವೆಂಕಟರಾಮಯ್ಯನವರು ಹೇಳಿದರು.

ಜಿಲ್ಲಾ ಪರಿಷತ್ ವ್ಯವಸ್ಥೆ ಸ್ವಾಗತಾರ್ಹ ಆದರೆ ರಾಜ್ಯದಲ್ಲಿ ಹೆಚ್ಚುವರಿ ಭೂಮಿಯ ಹಂಚಿಕೆ ಆಗಿಲ್ಲ. ಇಲ್ಲಿ ಹಂಚಿಕೆ ಆಗಿರುವುದು ಕೇವಲ 25 ಸಾವಿರ ಜನರಿಗೆ ಮಾತ್ರ ಆದರೆ ಪ. ಬಂಗಾಲದಲ್ಲಿ 8 ಲಕ್ಷ ಎಕರೆಯನ್ನು 16 ಲಕ್ಷ ಜನರಿಗೆ ಹಂಚಲಾಗಿದೆ. ಇದರ ಬಲದಿಂದ ಅಲ್ಲಿ ನಾನಾ ಜನ ಸಾಮಾನ್ಯವರ್ಗವನ್ನು ಜನತಂತ್ರದಲ್ಲಿ ಹೇಗೆ ಒಳಪಡಿಸಲಾಗಿದೆಯೋ ಅದನ್ನು ಇಲ್ಲಿ ಅನುಸರಿಸುವಲ್ಲಿ ವಿಫಲತೆ ವ್ಯಕ್ತವಾಗುತ್ತದೆ.

ಎಂದರು ಚುನಾವಣೆಗಳ ದೆಸೆಯಿಂದ ಪಾನಪ್ರಿಯತೆ ಎರಡುಪಟ್ಟಾಗಿದೆ ಗ್ರಾಮೀಣ ಪ್ರದೇಶದ ಜನಜೀವನವನ್ನು ಅಸ್ತವ್ಯಸ್ತಗೊಳಿಸುತ್ತಿದೆ. ಎಂದರು. [ಬಾಕ್ಸ್ ನೋಡಿ]

ಕರ್ನಾಟಕದ ಅಸಂಖ್ಯ ಗ್ರಾಮೀಣ ಬಡ ಜನರಿಗೆ ಒಳಿತನ್ನು ಉಂಟು ಮಾಡುವ ಯಾವುದೇ ನೀತಿಯ ನಿರೂಪಣೆ ಮಾಡದ ರಾಜ್ಯಪಾಲರ ಭಾಷಣ ನೀರಸವಾಗಿದೆ ಎಂದರು. ಕೇಂದ್ರ ಸರಕಾರದ ವಿರುದ್ಧ ರಾಮಕೃಷ್ಣ ಹೆಗಡೆಯವರು ಆಗಾಗ ಧ್ವನಿ ಎತ್ತುತ್ತಿರುತ್ತಾರೆ ನಿನ್ನೆ ಕೂಡ ವಿಧಾನ ಪರಿಷತ್‌ನಲ್ಲಿ ಈ ಬಗ್ಗೆ ಅಂಕಿ ಅಂಶಗಳನ್ನು ನೀಡಿದ್ದಾರೆ. ಆದರೆ ರಾಜ್ಯಪಾಲರ ಭಾಷಣದಲ್ಲಿ ಆ ಬಗ್ಗೆ ಒಂದು ಪದವೂ ಇಲ್ಲ ಅದಕ್ಕೆ ಬದಲಾಗಿ ಕೇಂದ್ರ ಸರಕಾರ ಕರ್ನಾಟಕದ ಜನತೆಗೆ ಬಹಳ ಒಳಿತನ್ನೇ ಮಾಡುತ್ತಿರುವಂತೆ ಬಿಂಬಿಸಲಾಗಿದೆ ಎಂದರು.

"ಕರ್ನಾಟಕದಲ್ಲಿ ಒಟ್ಟಾರೆ ಔದ್ಯಮಿಕ ಭಾಂಧವ್ಯಗಳು ಉತ್ತಮವಾಗಿದು ವೆಂದು ತಿಳಿಸಲು ನನಗೆ ಸಂತೋಷವಾಗುತ್ತದೆ" ಎಂದು ರಾಜ್ಯಪಾಲರು ತಿಳಿಸಿದ್ದಾರೆ. ಇದಂತೂ ಅಪ್ಪಟ್ಟ ಸುಳ್ಳು ಎಂಬುದು ರಾಜ್ಯ ಸರ್ಕಾರವೇ [3ನೇ ಪುಟ ನೋಡಿ]

ಜಿಲ್ಲಾ ಪರಿಷತ್ ಚುನಾವಣೆಗಳಲ್ಲಿ ಹರಿದ ಹೆಂಡದ ಹೊಳೆ

ಕಾಂ. ವೆಂಕಟರಾಮಯ್ಯನವರ ಪ್ರಶ್ನೆಗೆ ಸರ್ಕಾರ ನೀಡಿದ ಉತ್ತರ.

ಮದ್ಯಪಾನೀಯ	ಸಾಮಾನ್ಯವಾಗಿ ಮಾರಾಟವಾಗುವುದು	ಡಿ. 19 ರಿಂದ ಜ.3ವರೆಗೆ (ಲೀಟರುಗಳಲ್ಲಿ) ಮಾರಾಟವಾಗಿದ್ದು
ಸಾರಾಯಿ	7.92ಲಕ್ಷ	18.07 ಲಕ್ಷ
ಹೆಂಡ	37.99 ಲಕ್ಷ	85.30 ಲಕ್ಷ
ಬೀರು	4.30 ಲಕ್ಷ	9.47 ಲಕ್ಷ
ಭಾರತದಲ್ಲಿ ತಯಾರಿಸಿದ ವಿದೇಶಿಮದ್ಯ	1.57 ಲಕ್ಷ	3.31 ಲಕ್ಷ

'ಬಾಂಬಣ್ಣ ಬರಬೇಡ' ಮುಗಿಲು ಮುಟ್ಟಿದ ಮಕ್ಕಳ ಕೂಗು

ಮಲೆನಾಡಿನ ಮಡಿಲಲ್ಲಿ ನೆತ್ತಿಸುಡುತ್ತಿದ್ದ ಬಿಸಿಲನ್ನೂ ಲೆಕ್ಕಿಸದೆ ಬಣ್ಣ ಬಣ್ಣದ ಬೆಲೂನುಗಳನ್ನು ಆಕಾಶಕ್ಕೆ ಹಾರಿಬಿಡುತ್ತಾ ಶಿಸ್ತಾಗಿ ಸಾಗಿದ್ದ ಕರ್ನಾಟಕದ ಮೂಲೆ ಮೂಲೆಗಳಿಂದ ಆಗಮಿಸಿದ್ದ ಮಕ್ಕಳು ಯುದ್ಧ ಬೇಡ, ಬಾಂಬುಬೇಡ ಎಂಬ ಘೋಷಣೆ ಕೂಗಿದರು.

ಬೆಳ್ತಂಗಡಿಯ ಉಜಿರೆಯಲ್ಲಿ ನಡೆಯುತ್ತಿರುವ 26ನೆಯ ಅಖಿಲ ಕರ್ನಾಟಕ ಮಕ್ಕಳ ಸಮ್ಮೇಳನ ಯುದ್ಧ ಭೀತಿಯ ವಿರುದ್ಧ ತನ್ನ ದನಿ ಮೂಡಿಸಿತು. "ಬಾಂಬಣ್ಣ ಬರಬೇಡ, ನಿನ್ನಯ ಸಂಗ ಬೇಡವೇ ಬೇಡ" ಎಂದು ಕೂಗುತ್ತಾ ಬಾಂಬು ರಾಕ್ಷಸನ ಜೊತೆ "ಟೂ" ಬಿಟ್ಟವರಂತೆ ಬಿಸಿಲ ಝಳಕ್ಕೆ ಮುಖ ಊದಿಸಿ ಸಾಗಿದ್ದರು. ಮೆರವಣಿಗೆಯ ನಂತರ ಯುದ್ಧ ಬಾಂಬಿನ ಬೃಹತ್ ಪ್ರತಿಕೃತಿಯನ್ನು ಸುಡುವುದರ ಮೂಲಕ ಬಾಂಬು ರಾಕ್ಷಸನಿಗೆ ವಿದಾಯ ಹೇಳಿ ಶಾಂತಿ ಪಾರಿವಾಳಗಳನ್ನು ಮಲೆನಾಡಿನ ಮೂಲೆಯಿಂದ ಹಾರಿಬಿಟ್ಟರಲ್ಲದೆ, 26ನೆಯ ಮಕ್ಕಳ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಪುಟಾಣಿ ಅಖಿಲಾ, ತೊದಲು ಮಾತುಗಳಲ್ಲಿ ಯುದ್ಧ ಭೀತಿಯನ್ನು ಕುರಿತು ಮಾತನಾಡಿದಳು. "ನಾವು ಹಾರಿಬಿಟ್ಟ ಪಾರಿವಾಳಗಳು ಆಕಾಶದಲ್ಲಿನ ಅಣ್ವಸ್ತ್ರಗಳನ್ನು ಇಲ್ಲವಾಗಿಸಿ ಸ್ವಚ್ಛಂದ ನೀಲಿ ಆಕಾರವನ್ನು ನಮಗೆ ತೋರಿಸುತ್ತದೆ" ಎಂದಳು.

ನಂತರ ಕರ್ನಾಟಕದ ಎಲ್ಲಾ ಜಿಲ್ಲೆಗಳಿಂದ ಭಾಗವಹಿಸಿದ್ದ ಪುಟ್ಟ ಪ್ರತಿನಿಧಿಗಳು ವಿಶ್ವ ನಾಯಕರಿಗೆ ಇಡೀ ವಿಶ್ವವನ್ನು ಯುದ್ಧ ಭೀತಿಯಿಂದ ಇಲ್ಲವಾಗಿಸುವಂತೆ ಕರೆ ನೀಡಿದರಲ್ಲದೆ, ವಿಶ್ವಸಂಸ್ಥೆಗೆ ಸಾವಿರ ಸಹಿಗಳ ಮನವಿಯನ್ನು ಅರ್ಪಿಸಲು ನಿರ್ಧರಿಸಿ ತಮ್ಮನ್ನು ಬದುಕಿಸುವಂತೆ ಕರೆ ನೀಡಿದರು.

ಸಾಂಸ್ಕೃತಿಕ ರಂಗ

–ಬೀದರ್‌ನಲ್ಲಿ ಶೇಕ್ಸ್‌ಪಿಯರ್

ಬೀದರ್ ಸಮುದಾಯಕ್ಕೆ ಬೆಂಗಳೂರಿನ ಸಿ. ಬಸವಲಿಂಗಯ್ಯ ಶೇಕ್ಸ್‌ಪಿಯರ್‌ನ "ಮಿಡ್ ಸಮ್ಮರ್ ನೈಟ್ ಡ್ರೀಮ್ಸ್" ನಾಟಕ ಆಧಾರಿತ "ನಡು ಬೇಸಗೆಯ ಇರುಳ ಸವಿಗನಸು'' ನಾಟಕವನ್ನು ನಿರ್ದೇಶಿಸಿದರು. ಫೆಬ್ರವರಿ 27, 28 ರಂದು ಸಮುದಾಯ ಅಭಿನಯಿಸಿದ ನಾಟಕ ಇಡೀ ಹೈದರಾಬಾದ್ ಕರ್ನಾಟಕದಲ್ಲಿ ಮೊಟ್ಟ ಮೊದಲನೆಯದಾಗಿ ರಂಗವೇರಿದ ಶೇಕ್ಸ್‌ಪಿಯರ್ ನಾಟಕ.

ಅಗಲಿದ ಚಿತ್ತಾಲರು

ಕನ್ನಡ ನವ್ಯೋದಯದ ಮುಖ್ಯ ಕವಿಯಾಗಿದ್ದ ಗಂಗಾಧರ ಚಿತ್ತಾಲರು ಪಾರ್ಕಿನ್‌ಸನ್ ಕಾಯಿಲೆಯ ಉಲ್ಬಣದಿಂದಾಗಿ ಕೊನೆಯುಸಿರೆಳೆದರು.

ಕಾಲದ ಕರೆ (1948), ಮನುಕುಲದ ಹಾಡು (1961), ಹರಿವ ನೀರಿದು [1970], ಸಂಪರ್ಕ [1983] ಇವರ ಕವನ ಸಂಕಲನಗಳು. ತಮ್ಮ ಕೊನೆಯ, ಸಂಕಲನದಲ್ಲಿ.

ತಮ್ಮ ವ್ಯಾಧಿಯನ್ನು ಕುರಿತು ಬರೆಯುತ್ತಾ
ಚಹರೆಯೇ ಇಲ್ಲದ ಇದರ ವಿಕರಾಳ ಮುಖ
ಹೆಜ್ಜೆ ಹೆಜ್ಜೆಗೂ ಹುಟ್ಟಿಸುವ ಉದೆನಡುಕ
ವ್ಯಾಧಿಗ್ರಸ್ತನೊಬ್ಬನಿಗೆ ಗೊತ್ತು
ಇದು ಬಣ್ಣಿಸಲೆಳೆಸುವ ಬರಿ ಮಾತು–
ಏನನ್ನೂ ಹಿಡಿಯಲು ಬಾರದ ತೂತು ಎಂದು ಕರೆದಿದ್ದರು.

ಕಾಲ, ಸಾವು, ವ್ಯಕ್ತಿಯ ತೊಳಲಾಟಗಳೇ ಮುಖ್ಯಬಿಂದುವಾಗಿದ್ದ ಇವರ ಕವನಗಳಲ್ಲಿ ಇವರ ವ್ಯಾಧಿಯ ನೋವಿನ ಛಾಯೆ ಸದಾ ಎದ್ದು ಕಾಣುತ್ತಿತ್ತು.

ಕಾಮ ತುಂಬಿದ ಕಾಮಿಕ್ಸ್

ಜಪಾನ್ ಎಂದರೆ '12ರ ವರ್ಷದವರ ದೇಶ' ಎಂದು ಕೆಲವರು ಕರೆಯುತ್ತಾರೆ. ಕಾಮಿಕ್ಸ್ ಓದುವುದರಲ್ಲಿ ವೃದ್ಧರೂ ಹದಿಹರೆಯದವರ ಹುರುಪು ತೋರಿಸುತ್ತಾರೆ.ಇಲ್ಲಿ ವರ್ಷಕ್ಕೆ 2000 ಕೋಟಿ ರೂಪಾಯಿಗಳಷ್ಟು ಹಣ ಕಾಮಿಕ್ಸ್‌ಗಳಿಗೆಂದೇ ಖರ್ಚಾಗುತ್ತದೆ. 'ಮಂಗಾ' ಎಂದೇ ಖ್ಯಾತವಾಗಿರುವ ಜಪಾನಿನ ಈ ಕಾಮಿಕ್ಸ್‌ಗಳ ಪ್ರತಿ ಪುಟದಲ್ಲೂ ಕಾಮ, ಕಾಮ, ಕಾಮ,

ಬಸ್, ಟ್ರೇನ್‌ಗಳಲ್ಲಿ ಎಲ್ಲರ ಕೈಯಲ್ಲೂ ಕಾಣುವ ಮಂಗಾದತ್ತ ಇಣಕಿ ನೋಡಿದರೆ ಬೆಚ್ಚುತ್ತೀರ. ಪುಟ ಪುಟದಲ್ಲಿ ಹಿಂಸೆ, ಹೊಡೆದಾಟ, ಲೈಂಗಿಕ ದೃಶ್ಯಗಳು, ಚಿತ್ರ ವಿಚಿತ್ರ ಭಂಗಿಯಲ್ಲಿ ಮೈ ತೋರಿಸಿ ಬೆತ್ತಲಾಗುವ ಹುಡುಗಿಯರು. ಒಂದು ವಾರ ಪತ್ರಿಕೆಯಂತೂ 40 ಲಕ್ಷ ಪತ್ರಿಕೆಗಳನ್ನು ಮುದ್ರಿಸಿ ಮಾರುತ್ತಿದೆ. 1.5 ಬಿಲಿಯನ್ ಮಾರ್ಕ್‌ನಷ್ಟು ಆದಾಯ ಹೊಂದಿರುವ ಈ ಮಂಗಾ ಕಾಮಿಕ್ಸ್ ಅಲ್ಲಿನ ಪತ್ರಿಕೆಗಳವರ ಕೈನಲ್ಲಿ ಮಂಗನ ಕೈನ ಮಾಣಿಕ್ಯದಂತೆ. ಲೈಂಗಿಕತೆಯನ್ನೇ ಬಂಡವಾಳ ಮಾಡಿಕೊಂಡ ಈ ಕಾಮಿಕ್ಸ್‌ಗಳು ಅಮೇರಿಕಾದ ಕಾಮಿಕ್ಸ್ ಮಾರಾಟದ ಎರಡು ಪಟ್ಟು ಚಲಾವಣೆ ಹೊಂದಿದೆ.

ಅಮೇರಿಕಾ ಮೂಲದ 'ಮಂಗಾ' ಕಾಮಿಕ್ಸ್‌ನ ಒಡೆಯ ಫ್ರೆಡರಿಕ್ ಸ್ಕಾಡ್ ಈ ಕಾಮಿಕ್ಸ್‌ನ ಲೈಂಗಿಕತೆ ಮತ್ತು ಹಿಂಸೆ ಜಪಾನಿನ ಸಮಾಜದ ಮೇಲೆ ಯಾವ ಪರಿಣಾಮವನ್ನೂ ಬೀರುವುದಿಲ್ಲ ಆದ್ದರಿಂದಲೇ ನಾವು ಈ ರೀತಿಯ ಕಾಮಿಕ್ಸ್ ತರುವುದರಲ್ಲಿ ಯಾವ ಅಭ್ಯಂತರವೂ ಇಲ್ಲ ಎಂದಿದ್ದಾರೆ. ಈಗ ಜಪಾನ್‌ನಲ್ಲೂ ಫೋಟೋ ಕಾಮಿಕ್ಸ್ ಪ್ರಚಾರಕ್ಕೆ ಬಂದಿವೆ. ಕಾಮಿಕ್ಸ್ ಬಿಸಿದೋಸೆಯಂತೆ ಖರ್ಚಾಗುತ್ತಿದೆ. ಏಕೆಂದರೆ ಇದು ದಿಗಂಬರರ ಲೋಕ.

ಹಿಡಿದಿಟ್ಟದೆ ನೆನಪು

ಅನಂತತೆಯ ಈ ಬದುಕ ಲೀಲೆಗಳಲ್ಲಿ
ನೀನೆಲ್ಲೊ ಒಂದು ಮೂಲೆಯಲ್ಲಿ
ಹುಟ್ಟಿನ ಗುಟ್ಟಾಗಿ ಸಿಡಿದು
ಕೊಲ್ಲುವವರ ಆಟಿಗೆಯಾಗಿ
ಮಡಿದು ಹೋಗಿರಬಹುದು.
ನೀ ನಿರ್ಮಿಸಿದ ಹೋರಾಟದ
ಹಾದಿ
ಆಗಿರಬಹುದು ತುಳಿಯುವವರಿಗೆ
ಬುನಾದಿ
ನೀ ಎತ್ತಿದ ಧ್ವನಿ
ಆಗಿರಬಹುದು ಶೋಷಿತರಿಗೆ ಸೀರ್ವನಿ
ನೋವುಂಡವರಿಗೆ ಕೊಟ್ಟಿರಬಹುದು
ಬಾಗಿನ
ರಕ್ತದ ಕಣ ಕಣ
ಆದರೆ ಇಲ್ಲಿ
ಹೋರಾಡಿ ಮಡಿದವರಿಗೆ
ಮಿಡಿವ ಮನಗಳಲ್ಲಿ
ಸ್ಥಳ ಕಾದಿಟ್ಟದೆಯಲ್ಲ.
ಬಂಡೇಳುವ
ಹಾಡಿನ ಬಿಡಿನುಡಿಗಳಲ್ಲಿ
ನೆನಪು ಹಿಡಿದಿಟ್ಟದೆಯಲ್ಲ

–ಮೇಟಿಕೊಟ್ರಪ್ಪ

(ಬೆಂಜಮಿನ್ ಮೊಲಾಯಿಸ್ ಕುರಿತು)

'ಕಾರ್ಮಿಕ ರಂಗದಲ್ಲಿ ಶಾಂತಿ' ಎಂಬ ಮಾತು ಅಪ್ಪಟ ಸುಳ್ಳು

(2ನೇ ಪುಟದಿಂದ)

ಪ್ರಶ್ನೆಯೊಂದಕ್ಕೆ ಉತ್ತರವಾಗಿ ನೀಡಿದ ಮಾಹಿತಿಯಿಂದ ಸ್ಪಷ್ಟವಾಗುತ್ತದೆ. (ಬಾಕ್ಸ್ ನೋಡಿ).

82,83,84,ನೇ ವರ್ಷಕ್ಕೆ ಹೋಲಿಸಿದರೆ 85,86,ರಲ್ಲಿ ಮುಷ್ಕರಗಳು ಬಹಳಷ್ಟು ಕಡಿಮೆಯಾಗಿವೆ. 84ರಲ್ಲಿ ಮುಷ್ಕರಗಳಿಂದ 5ಲಕ್ಷ 87ಸಾವಿರ ಮಾನವ ದಿನಗಳಷ್ಟು ಕೆಲಸ ನಷ್ಟವಾಗಿದ್ದರೆ 1985ರಲ್ಲಿ ಅದು ಸುಮಾರು ಅರ್ಧಕ್ಕೆ ಇಳಿಯಿತು, 86ರಲ್ಲಿ ಕೇವಲ ಐದನೇ ಒಂದು ಭಾಗಕ್ಕೆ ಇಳಿಯಿತು. ಕೇವಲ 1ಲಕ್ಷ 21ಸಾವಿರ ಮಾನವ ದಿನಗಳ ನಷ್ಟ. ಆದರೆ ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿರುವುದಕ್ಕೆ ತಮ್ಮ ಬೇಡಿಕೆಗಳನ್ನು ಪಡೆಯುವುದಕ್ಕೆ ಅಡ್ಡಿಯಾಗಿರುವಾಗಲೇ ಲಾಕೌಟ್‌ಗಳು, [ಬೀಗ ಮುದ್ರೆಗಳು] ಲೇ ಆಫ್, ಕೆಲಸದಿಂದ ತೆಗೆದು ಹಾಕುವುದು ಇತ್ಯಾದಿಗಳು ಸರ್ವೇ ಸಾಮಾನ್ಯವಾಗಿವೆ. ಮಾಲೀಕ ವರ್ಗ ನಿರಂಕುಶವಾಗಿ ನಿರಂತರವಾಗಿ ಧಾಳಿ ನಡೆಸುತ್ತಾ ಬಂದಿದೆ. ಅದಕ್ಕೆ ಸರಕಾರದ ಕಡೆಯಿಂದ ಯಾವುದೇ ಅಡ್ಡಿ ಆತಂಕಗಳಿಲ್ಲ ಎನ್ನುವುದನ್ನು ಈ ಅಂಕಿ ಅಂಶಗಳು ಸಾಬೀತು ಪಡಿಸುತ್ತವೆ. ಸಾವಿರಾರು ಕಾರ್ಮಿಕರು ಕೆಲಸವಿಲ್ಲದೆ ಹೊರಗುಳಿದಿರುವಾಗ ಫುಟ್ ಪಾತ್‌ನ ಮೇಲಿರುವಾಗ ಕಾರ್ಮಿಕ ರಂಗದಲ್ಲಿ ಶಾಂತಿ ನೆಲಸಿದೆ ಎಂಬುದು ಎಂತಹ ಮಾತು. ಅದೇ ರೀತಿ ಕನಿಷ್ಠ ಕೂಲಿಯಲ್ಲಿಯೂ ಸರಕಾರ ಕಾರ್ಮಿಕರಿಗೆ ಅನ್ಯಾಯ ಮಾಡಿದೆ. ಲಕ್ಷಾಂತರ ಬೀಡಿ ಕಾರ್ಮಿಕರಿಗೆ, ಸಾವಿರಾರು ಹಂಚಿನ ಕಾರ್ಮಿಕರಿಗೆ ಅನ್ಯಾಯ ಮಾಡಿ ಕಾರ್ಮಿಕರ ಏಳಿಗೆಯ ಬಗ್ಗೆ ಮಾತನಾಡುವುದು ನಾಚಿಗೆ ಗೇಡು ಎಂದರು.

ಅದೇ ರೀತಿಯಲ್ಲಿ ಗ್ರಾಮೀಣ ರಂಗದಲ್ಲಿ ರೈತರು ಬೆಳೆದ ಬೆಳೆಗೆ ಲಾಭದಾಯಕ ಬೆಲೆ ಕೊಡುವ ಕೃಷಿ ಕಾರ್ಮಿಕರಿಗೆ ಕನಿಷ್ಠ ಕೂಲಿ, ಕೆಲಸ ಒದಗಿಸುವ ಮಾತಿಲ್ಲದೆ ಇದೆಂತಹ ನೀತಿ ನಿರೂಪಣೆ ಎಂದು ಹಂಗಿಸಿದರು.

ಮುಷ್ಕರ, ಬೀಗ ಮುದ್ರೆಗಳು

ವಿವರಗಳು	1984 ಸಂಖ್ಯೆ	1984 ಮಾನವದಿನ ನಷ್ಟ	1985 ಸಂಖ್ಯೆ	1985 ಮಾನವದಿನ ನಷ್ಟ	1986 ಸಂಖ್ಯೆ	1986 ಮಾನವದಿನ ನಷ್ಟ
ಮುಷ್ಕರ	32	587026	25	384504	31	121767
ಬೀಗಮುದ್ರೆ	7	301155	8	628925	6	94960
ಲೇ-ಆಫ್	25	61653	20	133239	24	373354

ಮುಚ್ಚಿದ ಕೈಗಾರಿಕೆಗಳು

ವಿವರಣೆಗಳು	1984 ಪ್ರಕರಣಗಳ ಸಂಖ್ಯೆ	1984 ಭಾದಿತ ಕೆಲಸಗಾರರ ಸಂಖ್ಯೆ	1985 ಪ್ರಕರಣಗಳ ಸಂಖ್ಯೆ	1985 ಭಾದಿತ ಕೆಲಸಗಾರರ ಸಂಖ್ಯೆ	1986 ಪ್ರಕರಣಗಳ ಸಂಖ್ಯೆ	1986 ಭಾದಿತ ಕೆಲಸಗಾರರ ಸಂಖ್ಯೆ
ಮುಚ್ಚುವಿಕೆ	1	52	2	521	1	30
ತೆಗೆದು ಹಾಕುವಿಕೆ	2	55	2	14	—	—

ರಾಷ್ಟ್ರೀಯವಾದೀ ಶಕ್ತಿಗಳು, ಕಾರ್ಮಿಕ ಸಂಘಗಳು ಮಾಡಬೇಕಾದ ಕೆಲಸ

[1ನೇ ಪುಟದಿಂದ]

ಛಿದ್ರಕಾರಿ ಕೃತ್ಯಗಳಿಗೆ ಬಳಸದಂತೆ ತಡೆಯುವುದು ಹೇಗೆ ಎಂಬ ಪ್ರಶ್ನೆ ಏಳುವುದು ಇಲ್ಲಿಯೇ. ಇದೊಂದು ದೀರ್ಘಕಾಲದ ಹೋರಾಟ.ತಾತ್ಕಾಲಿಕ ರೀತಿಯಲ್ಲಿ ಅರೆ-ಬರೆ ರಾಜ್ಯಗಳಿಂದ ಇದನ್ನು ನಡೆಸಲು ಸಾಧ್ಯವಿಲ್ಲ. ಮುಸ್ಲಿಮರು, ಮುಸ್ಲಿಮೇತರರು ಸರ್ವರೂ ತಮ್ಮ ತಪ್ಪು ದೃಷ್ಟಿಕೋನಗಳನ್ನು ತ್ಯಜಿಸುವಂತೆ ಅವರ ಪ್ರಜ್ಞೆಯನ್ನು ತಿದ್ದಿಕೊಳ್ಳುವಂತೆ ಹೋರಾಟ ಮಾಡುವ ಇದಕ್ಕೆ ನಾವು ಸಮಸ್ಯೆಯ ಮೂಲಕ್ಕೇ ಹೋಗಬೇಕು.

ಅಲ್ಪ ಸಂಖ್ಯಾತರು ಮತ್ತು ರಾಷ್ಟ್ರೀಯ ಐಕ್ಯತೆಯ ನಡುವೆ ಈ ಭಿನ್ನತೆಗೆ ಕಾರಣವೇನು ? ಅವರೇಕೆ ಪ್ರತ್ಯೇಕವಾದಿ ಭಾವನೆಗೆ ಬಲಿಯಾಗುತ್ತಾರೆ. ? ಇಸ್ಲಾಮಿನ ಹಳೆಯ ರೂಢಿಗಳಿಗೆ ಬದ್ಧವಾಗಿರುವುದರಿಂದಲೋ ಅಥವಾ ಅದು ಬೂರ್ಜ್ವಾ-ಭೂಮಾಲಕ ಆಳ್ವಿಕೆಯಲ್ಲಿನ,ಧರ್ಮದ ಪರಿಧಿಯ ಹೊರಗಿನ ಅನ್ಯಾಯಗಳ ವಿರುದ್ಧ ವಿಕೃತ ಅಭಿವ್ಯಕ್ತಿಯೋ ?

ಮುಸ್ಲಿಂ ಜನ ಸಾಮಾನ್ಯರು ಇತರ ಭಾರತೀಯ ಜನಸಾಮಾನ್ಯರಂತೆ ಬಡಜನ, ನಿರುದ್ಯೋಗ, ಶಿಕ್ಷಣ-ಆರೋಗ್ಯ ಸೌಲಭ್ಯಗಳ ಅಭಾವದಿಂದ ನರಳುತ್ತಿದ್ದಾರೆ ಆದರೆ ಹೀಗೆ ಸಮಾನ ಸಮಸ್ಯೆಗಳಿದ್ದ ಮಾತ್ರಕ್ಕೆ ತಂತಾನೆ ಒಂದು ಸಮಾನ ರಾಷ್ಟ್ರೀಯ ವರ್ಗ ಪ್ರಜ್ಞೆ ಬರಲಾರದು. ಯಾಕೆಂದರೆ ನಮ್ಮ ಸಂವಿಧಾನ ಕಾನೂನಿನೆದುರು ಎಲ್ಲರೂ ಸಮಾನರೆಂದು ಘೋಷಿಸಿದರೂ ಮುಸ್ಲಿಮ್ ಜನಸಾಮಾನ್ಯರು ವಿಶಿಷ್ಟ ತೊಂದರೆಗಳಿಂದ ಬಳಲುತ್ತಿದ್ದಾರೆ. ಇದು ವರ್ಗ ಆಳ್ವಿಕೆಯ ನೇರ ಫಲ. ಅಲ್ಪ ಸಂಖ್ಯಾತರಿಗೆ ಸಂಬಂಧ ಪಟ್ಟಂತೆ ಈ ವರ್ಗ ಆಳ್ವಿಕೆ ಮಾಡುತ್ತಿರುವುದು ಮಾಡಬಹುದಾದುದು ಇಷ್ಟೆ. ಜನಸಾಮಾನ್ಯ ಮುಸ್ಲಿಮರನ್ನು ಹೆದರಿಸುವುದು, ಹಾಗೂ ಅವರ ಪ್ರತಿಗಾಮೀ ಮುಖಂಡರನ್ನು ಓಲೈಸುವುದು.

ಮುಸ್ಲಿಮರನ್ನು ದೂರವಿಡುವ ಬಹುಪಾಲು ಹಿಂದೂಗಳ ನಡವಳಿಕೆ ಮಾತ್ರವಲ್ಲದೆ, ಕಾಂಗ್ರೆಸ್ [ಐ] ನ ವರ್ತನೆ, ಸಂಪ್ರದಾಯವಾದಿಗಳ ಹೊಸ ಆಕ್ರಮಣ, ಪ್ರಚೋದನೆ ಮತ್ತು ಅದರಲ್ಲಿ ಸಾಮಾನ್ಯವಾಗಿ ಆಡಳಿತ ಯಂತ್ರದ ಶಾಮೀಲು ಪ್ರತ್ಯೇಕತಾ ಭಾವನೆಯನ್ನು ಬಲಪಡಿಸಿ, ಧರ್ಮಾಂಧತೆಯ ಬೀಜ ಬಿತ್ತುತ್ತಿದೆ. ಮುಸ್ಲಿಮರ ಪ್ರಜಾಪ್ರಭುತ್ವ ಹಕ್ಕುಗಳ ಮೇಲಿನ ದಾಳಿಗಳ ಗಹನತೆಯನ್ನು ರಾಷ್ಟ್ರೀಯವಾದಿ ಶಕ್ತಿಗಳು ಹಗುರವಾಗಿ ಕಾಣುವುದರಿಂದಾಗಿ ರಾಷ್ಟ್ರೀಯ ಐಕ್ಯತೆಗಾಗಿ ಅವರ ಮನವಿ ಮುಸ್ಲಿಮರಿಗೆ ಅಸಮಾನತೆಯನ್ನು ಸಮರ್ಥಿಸುವಂತೆ ಪಕ್ಷಪಾತ ಪೂರ್ಣವಾಗಿ ಕಾಣಿಸುತ್ತದೆ.

ಸಾಮಾನ್ಯವಾಗಿ ಹಿಂದೂ ಕೋಮು ಸಂಘಟನೆಗಳು ಪ್ರಚೋದಿಸುವ ಹಿಂದೂ-ಮುಸ್ಲಿಂ ದಂಗೆಗಳಲ್ಲಿ ಇದು ಚೆನ್ನಾಗಿ ಕಂಡುಬರುತ್ತದೆ. ಇತ್ತೀಚಿಗೆ ಮಹಾರಾಷ್ಟ್ರದಲ್ಲಿನ ದಂಗೆಗಳು ಆಡಳಿತದ ಶಾಮೀಲಿಗೆ ಹಾಗೂ ರಾಷ್ಟ್ರೀಯವಾದಿಗಳ ನಿಷ್ಕ್ರಿಯತೆಗೆ ಒಂದು ಸಜೀವ ಉದಾಹರಣೆ.

ಮಹಾರಾಷ್ಟ್ರದ ಕೋಮು ದಂಗೆಗಳಲ್ಲಿ ಈಗೀಗ ಶಿವಸೇನೆಯ ಹೆಸರು ಹೆಚ್ಚೆಚ್ಚು ಕೇಳಬರುತ್ತಿದೆ. ಇದು ಬಿ.ಜೆ.ಪಿ. ಹಾಗೂ ಆರ್.ಎಸ್.ಎಸ್.ಗಳ ಸ್ಥಾನ ಆಕ್ರಮಿಸಲು ಲೆಕ್ಕಾಚಾರ ಹಾಕುತ್ತಿದೆ. ವಿಜಯದಶಮಿಯ ದಿನ ಶಿವಸೇನೆಯ ಮುಖಂಡ ಬಾಳಠಾಕ್ರೆಯವರು ಮುಸ್ಲಿಂ ವಿರೋಧಿ ಪ್ರಚೋದನಕಾರಿ ಭಾಷಣ ಮಾಡಿದರೂ ಅಲ್ಲಿನ ಕಾಂಗ್ರೆಸ್ [ಐ] ಸರ್ಕಾರ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ಯಾಕೆಂದರೆ ಆ ಪಕ್ಷದ ಒಂದು ವಿಭಾಗಕ್ಕೆ ಶಿವಸೇನೆಯೊಂದಿಗೆ ಘನಿಷ್ಟ ಸಂಬಂಧವಿದೆ.

ಇತ್ತೀಚಿನ ಮುಂಬೈ ಕಾರ್ಪೊರೇಶನ್ ಚುನಾವಣೆಗಳಲ್ಲಿ ಕಾಂಗ್ರೆಸ್ [ಐ] ಉಮೇದುವಾರರು ಇದರಿಂದ ಸೋಲಬೇಕಾಗಿ ಬಂತು. ಮಜಲ್ ಗಾಂವ್ ಪಟ್ಟಣದಲ್ಲಿ ಕಳೆದ ನವಂಬರ್ 15 ರಂದು ಮುಸ್ಲಿಮರು ಪೈಗಂಬರರ ಜನ್ಮದಿನ ಆಚರಿಸಬೇಕಾಗಿದ್ದ ದಿನವೇ ಶಿವಸೇನೆ ಒಂದು ಸಭೆಯನ್ನು ಏರ್ಪಡಿಸಿತು. ಜನ್ಮದಿನಾಚರಣೆಯ ಮೆರವಣಿಗೆಯನ್ನು ಮುಸ್ಲಿಮರು ಒಂದು ವಾರ ಮುಂದೂಡಿದರು. ಆದರೂ ದಂಗೆಗಳನ್ನು ತಪ್ಪಿಸಲಾಗಲಿಲ್ಲ. ಸಾಲದಕ್ಕೆ ಪೋಲೀಸರ ಲಾಠೀ ಚಾರ್ಜ್. ಹಾಗೂ ಗುಂಡುಗಳನ್ನು ಎದುರಿಸಬೇಕಾಗಿ ಬಂದದ್ದು ಮುಸ್ಲಿಂ ಮೆರವಣಿಗೆಕಾರರೇ ಹೊರತು ಅದನ್ನು ಅಸ್ತವ್ಯಸ್ತಗೊಳಿಸಲು ಪ್ರಯತ್ನಿಸಿದವರಲ್ಲ.

ಆಡಳಿತ ನಡೆಸುವ ಶಕ್ತಿಗಳಲ್ಲಿರುವ ಕೋಮುವಾದಕ್ಕೆ ತಡೆಯೊಡ್ಡದಂತೆ ಆಳುವ ವರ್ಗಗಳು ಹಾಗೂ ಆಳುವ ಪಕ್ಷ ನೋಡಿಕೊಳುತ್ತಿದೆ.

ಸಾಮಾನ್ಯ ಮುಸ್ಲಿಮನೊಬ್ಬ ತನ್ನ ಕೋಮಿನ ಶಕ್ತಿಯ ಆಸರೆ ಪಡೆಯುವಂತೆ ಅವನನ್ನು ದೂಡುವುದು, ಮೂಲಭೂತವಾದಿಗಳಿಗೆ ಆತ ಶರಣಾಗುವಂತೆ ಮಾಡುವುದು ಇಂತಹ ಪರಿಸ್ಥಿತಿಗಳೇ. ಇದನ್ನು ಸರಿಪಡಿಸದೆ ಮುಸ್ಲಿಮರನ್ನು ರಾಷ್ಟ್ರೀಯ ಜೀವನ ಧಾರೆಗೆ ಸೇರಿಯುವ ಮಾತು ಕೇವಲ ಹಾಸ್ಯಾಸ್ಪದ ಮಾತ್ರವಲ್ಲ, ಗಾಯದ ಮೇಲೆ ಬರೆ ಎಳೆದಂತೆ. ರಾಷ್ಟ್ರೀಯ ಜೀವನ ಧಾರೆಯೊಳಗೆ ಪ್ರವೇಶಿಸದಂತೆ ಬೇಲಿ ಕಟ್ಟುವವರಿಗೆ ಬೇಲಿಯ ಆಚೆಗಿರುವವರನ್ನು ಟೀಕಿಸುವ ಅಧಿಕಾರವಿಲ್ಲ.

ಈಗಿನ ಪರಿಸ್ಥಿತಿಯ ದೊಡ್ಡ ದೌರ್ಬಲ್ಯವೆಂದರೆ ದಂಗೆಗಳ ಸಮಯದಲ್ಲಿ ಅಲ್ಪಸಂಖ್ಯಾತರು ಹಿಂದೂ ಸಂಕುಚಿತವಾದಿಗಳ ಆಕ್ರಮಣಕಾರಿ ಹಲ್ಲೆಗಳಿಗೆ ತುತ್ತಾದಾಗ

ರಾಷ್ಟ್ರೀಯವಾದೀ ಶಕ್ತಿಗಳ ನಿಷ್ಕ್ರಿಯತೆ.

ಇದು ಕೇವಲ ಕಾನೂನು ವ್ಯವಸ್ಥೆಯ ಪ್ರಶ್ನೆ, ಆಡಳಿತ ಯಂತ್ರ ನಿಷ್ಪಕ್ಷಪಾತವಾಗಿ ಕೋಮು ದಂಗೆಗಳನ್ನು ನಿಭಾಯಿಸುತ್ತದೆ ಎಂಬ ಭ್ರಮೆಯನ್ನು ಪ್ರತಿಯೊಂದು ಪ್ರಕರಣವೂ ತೊಡೆದು ಹಾಕುತ್ತಿದ್ದರೂ ರಾಷ್ಟ್ರೀಯವಾದಿ ಶಕ್ತಿಗಳು ಈ ಭ್ರಮೆಗೇ ಅತುಕೊಂಡಿರುವುದರಿಂದ ಎಲ್ಲಾ ಜನವಿಭಾಗಗಳ, ಎಲ್ಲಾ ಕೋಮುಗಳ-ಜನಗಳ ಒಟ್ಟುಗೂಡಿದ ಶಕ್ತಿಯೊಂದಿಗೆ ಈ ದಂಗೆಗಳ ಸಮಯದಲ್ಲಿ ಮಧ್ಯಪ್ರವೇಶಿಸುತ್ತಿಲ್ಲ. ಇಂತಹ ಭಾಷಾ, ಕೋಮು ಹಾಗೂ ಪ್ರತ್ಯೇಕತಾವಾದಿ ದಂಗೆಗಳು ನಡೆದಾಗ ಜನಸಾಮಾನ್ಯರು ತಮ್ಮ ಚಿಪ್ಪಿನೊಳಗೆ ಸೇರಿಕೊಂಡು ಮೂಕ ಪ್ರೇಕ್ಷಕರಾಗುತ್ತಾರೆ. ಹಲವಾರು ರಾಜ್ಯಗಳಲ್ಲಿ ಜನಗಳ ಮೇಲೆ ವ್ಯಾಪಕ ಪ್ರಭಾವ ಹೊಂದಿರುವ ಕಾಂಗ್ರೆಸ್ (ಐ) ಹಾಗೂ ಇತರ ಬೂರ್ಜ್ವಾ ಪಕ್ಷಗಳ ವಿಫಲತೆಯಿದು.

ಸಿ.ಪಿ.ಐ. (ಎಂ) ಹಾಗೂ ಎಡಪಕ್ಷಗಳು ಬಲಶಾಲಿಯಾಗಿದ್ದಲ್ಲಿ ಇಂತಹ ಪರಿಸ್ಥಿತಿಯಲ್ಲಿ ಆಡಳಿತ ಯಂತ್ರಕ್ಕೇ ಬಿಟ್ಟುಕೊಟ್ಟು, ತೆಪ್ಪಗಿರದೆ ಜನರು ಮಧ್ಯ ಪ್ರವೇಶಿಸಿದ್ದಾರೆ ಎಂಬುದು ಎಲ್ಲರಿಗೂ ತಿಳಿದ ವಿಷಯ. ಉದಾಹರಣೆಗೆ ಇಂದಿರಾಗಾಂಧಿಯವರ ಕೊಲೆಯ ನಂತರ ನಡೆದ ಸಿಖ್-ವಿರೋಧಿ ದಂಗೆಗಳ ಸಮಯದಲ್ಲಿ ಅಸ್ಸಾಂ, ಪಂಜಾಬ್ ಹಾಗೂ ಈಗ ಡಾರ್ಜಿಲಿಂಗ್‌ನಲ್ಲಿ ಡಾರ್ಜಿಲಿಂಗ್‌ನ ಟೀ ತೋಟದ ನೇಪಾಳೀ ಮಾತನಾಡುವ ಕಾರ್ಮಿಕರು ಸಿ. ಐ. ಟಿ. ಯು. ಸಂಘಗಳ ನೇತೃತ್ವದಲ್ಲಿ ಗೂರ್ಖಾಲ್ಯಾಂಡ್ ಚಳುವಳಿಯ ವಿರುದ್ಧ ತೀವ್ರ ಹೋರಾಟ ನಡೆಸುತ್ತಿದ್ದಾರೆ.

ಅಲ್ಪ ಸಂಖ್ಯಾತರು ಕೋಮುವಾದಿಗಳ ಧಾಳಿಗೆ ತುತ್ತಾದಾಗ ಮಧ್ಯಪ್ರವೇಶಿಸದೇ ಇದ್ದಲ್ಲಿ ರಾಷ್ಟ್ರೀಯ ಐಕ್ಯತೆಗೆ ಧಕ್ಕೆ ಬರುತ್ತದೆಂಬ ಅರಿವು ಇನ್ನೂ ಬಹುಸಂಖ್ಯಾತ ಕೋಮಿನ ರಾಷ್ಟ್ರೀಯವಾದಿಗಳಿಗೆ ಬಂದಿಲ್ಲ. ಇದರಿಂದಾಗಿ ಇವರಿಗೂ ಆರ್.ಎಸ್.ಎಸ್., ಬಿ.ಜೆ.ಪಿ, ಶಿವಸೇನೆಗಳಂತಹ ಹಿಂದೂ ಕೋಮುವಾದಿಗಳಿಗೂ ಯಾವ ವ್ಯತ್ಯಾಸವೂ ಇಲ್ಲ ಎಂದು ಮುಸ್ಲಿಂ ಜನಸಾಮಾನ್ಯರು ಭಾವಿಸುವಂತಾಗಿ,ಮುಸ್ಲಿಂ ಕೋಮುವಾದಿಗಳಿಗೆ ಅನುಕೂಲವಾಗುತ್ತದೆ.ಹಿಂದೂ ಮತ್ತು ಮುಸ್ಲಿಂಜನ ಸಮೂಹಗಳು ಜತೆ ಜತೆಯಾಗಿ ಚಟುವಟಿಕೆಗಳಲ್ಲಿ ತೊಡಗುವ ಕಾರ್ಮಿಕ ಸಂಘಗಳು ಹಾಗೂ ಇತರ ಸಂಘಟನೆಗಳು ಕೂಡಾ ಮುಸ್ಲಿಂ ಜನಸಾಮಾನ್ಯರನ್ನು ತಲುಪಲು, ಸರ್ವರ ಹೋರಾಟದತ್ತ ಅವರನ್ನು ಸೆಳೆಯಲು ಮತ್ತು ಅವರ ವಿಶಿಷ್ಟ ಸಮಸ್ಯೆಗಳನ್ನು ಪರಿಹರಿಸುವತ್ತ ಪ್ರಯತ್ನ ನಡೆಸುತ್ತಿಲ್ಲ.

ಬಾಬರೀ ಮಸೀದಿ ದೇವಸ್ಥಾನದ ಪ್ರಶ್ನೆಯಲ್ಲಿ ಮೂಲಭೂತವಾದುದು ಏನೂ ಇಲ್ಲ. ಆದರೆ ಅಪನಂಬಿಕೆ ಹಾಗೂ ಅಸಮಾನತೆಯ ವಾತಾವರಣದಲ್ಲಿ ಈ ಪ್ರಶ್ನೆಯನ್ನು ಕೋಮು ಶಕ್ತಿಗಳು ಬಳಸಿಕೊಳ್ಳುತ್ತಿವೆ. ಸಮಸ್ಯೆಯಲ್ಲಿ ಸಕಾರಣವಾದ ಕೊರಗು ಇದ್ದಲ್ಲಿ ಭಾವೋದ್ರೇಕಕ್ಕೆ ಎಡೆಯಾಗುತ್ತದೆ. ಒಗ್ಗಟ್ಟಾದ ರಾಷ್ಟ್ರೀಯವಾದೀ ಅಭಿಪ್ರಾಯದ ಒತ್ತಡ ಕೋಮು ಸೌಹಾರ್ದ ಕಾಪಾಡುತ್ತಲೇ ಇಂತಹ ಪ್ರಶ್ನೆಗಳನ್ನು ಸುಲಭವಾಗಿ ಪರಿಹರಿಸಬಲ್ಲುದು

ಇದು ನಿಮಗೆ ಗೊತ್ತೆ?

ಮುಂದಿನ ವಾರದಿಂದ ಸಮಾಜವಾದಿ ಹಾಗೂ ಬಂಡವಾಳಶಾಹೀ ಜಗತ್ತಿನ ಬಗ್ಗೆ ಬೇಕಾದ ವಿಶೇಷ ಸುದ್ದಿಗಳ ಪ್ರಕಟಣೆ ಆರಂಭವಾಗುತ್ತದೆ.

ಪ. ಬಂಗಾಳ ಸರ್ಕಾರದ ಇನ್ನೊಂದು "ಪ್ರಥಮ"

ಜನರನ್ನು ಒಳಗೊಳ್ಳುವ ಜಿಲ್ಲಾ ಯೋಜನೆಗಳು

ದೇಶದಲ್ಲೇ ಮೊದಲ ಬಾರಿಗೆ ಜಿಲ್ಲೆ ಮತ್ತು ಬ್ಲಾಕ್ ಹಂತಗಳಲ್ಲಿ 1985-86ರಲ್ಲಿ ಯೋಜನೆಗಳು ತಯಾರಿಸಲ್ಪಟ್ಟು ಜಾರಿಗೆ ಬಂದಿರುವುದು ಪಶ್ಚಿಮ ಬಂಗಾಳ ಎಡರಂಗದ ಪ್ರಜಾಸತ್ತಾತ್ಮಕ ವಿಕೇಂದ್ರಿಕರಣದಲ್ಲಿ ಇನ್ನೊಂದು ಮೈಲಿಗಲ್ಲು.

ಜನಸಾಮಾನ್ಯರು ಯೋಜನೆಯ ತಯಾರಿ ಮತ್ತು ಕಾರ್ಯಗತಗೊಳಿಸುವ ಎಲ್ಲಾ ಹಂತಗಳಲ್ಲಿ ಸಂಘಟಿತವಾಗಿ ಪಾಲುಗೊಳ್ಳುವಂತೆ ಮಾಡುವುದು, ಜಿಲ್ಲಾ ಯೋಜನೆಗಳ ಕಾರ್ಯಕ್ರಮದಲ್ಲಿ ಎಡರಂಗದ ಮುಖ್ಯ ಉದ್ದೇಶ. ಈ ಯೋಜನೆಗಳು ಜನರ ದೈನಂದಿನ ಕಷ್ಟ ಕೋಟಲೆಗಳಿಗೆ ಪರಿಹಾರ ಕೊಡುವ ಉದ್ದೇಶ ಹೊಂದಿವೆ.

ಗ್ರಾಮ ಪಂಚಾಯಿತಿಗಳು ಈಗಾಗಲೇ ಹಲವು ಮುಖ್ಯ ಕಾರ್ಯಕ್ರಮಗಳನ್ನು ಜನರ ಸಹಕಾರ, ಪಾಲುಗೊಳ್ಳುವಿಕೆಯಿಂದ ಕಾರ್ಯಗತಗೊಳಿಸುವಲ್ಲಿ ಸಫಲಗೊಂಡಿವೆ. ಭೂಸುಧಾರಣೆಗಳು, NREP, IRDP, RLEGP ಮುಂತಾದುವು ಇಂತಹ ಕಾರ್ಯಕ್ರಮಗಳು. ರಸ್ತೆಗಳ ನಿರ್ಮಾಣ, ಸಣ್ಣ ನೀರಾವರಿ ಮುಂತಾದ ಕಾರ್ಯಕ್ರಮಗಳನ್ನೂ ಗ್ರಾಮ ಪಂಚಾಯತ್‌ಗಳು ಸರ್ಕಾರಿ ಇಲಾಖೆಗಳು ಮಾಡುವ ವೆಚ್ಚದ ಅರ್ಧದಲ್ಲಿ ಮಾಡಿದ ಉದಾಹರಣೆಗಳು ಹಲವು ಇವೆ. ಪಂಚಾಯತ್‌ಗಳು ಕಂಟ್ರಾಕ್ಟರ್ ಮಾಡುವ ಮೇಲುಸ್ತುವಾರಿಯ ಕೆಲಸವಹಿಸಿಕೊಂಡಿರುವುದೇ ಇದಕ್ಕೆ ಮುಖ್ಯ ಕಾರಣ. ಆದರೆ ಹೆಚ್ಚಿನ ಯೋಜನಾ ಕಾರ್ಯಗಳು ಸರ್ಕಾರಿ ಇಲಾಖೆಗಳಿಂದ ಜಾರಿಯಾಗುತ್ತಿದ್ದವು. ಇವುಗಳಲ್ಲಿ ಪಂಚಾಯತುಗಳಿಗೆ ಯಾವುದೇ ಗಮನಾರ್ಹ ಪಾತ್ರವಿರಲಿಲ್ಲ. ಸಣ್ಣ ನೀರಾವರಿ, ರಸ್ತೆ ನಿರ್ಮಾಣ, ಮತ್ತು ರಿಪೇರಿ ಇಂತಹ ಕೆಲವು ಯೋಜನಾ ಕಾರ್ಯಗಳು. ಹೆಚ್ಚಿನ ಯೋಜನಾ ಕಾರ್ಯಗಳು ಸರ್ಕಾರಿ ಇಲಾಖೆಗಳ ಕೇಂದ್ರಿಕೃತ ಕಾರ್ಯರೀತಿ ಮತ್ತು, ಆ ಕಾರಣ ಹೆಚ್ಚು ವೆಚ್ಚ ಮತ್ತು ಜನರ ಪಾಲುಗೊಳ್ಳುವಿಕೆಗೆ ಅವಕಾಶವಿಲ್ಲದೆ ಜಾರಿಯಾಗುತ್ತಿದ್ದವು. ಇದನ್ನು ಬದಲಿಸಲು ಯೋಜನಾ ಪಕ್ರಿಯೆಗಳಲ್ಲಿ ಇಲಾಖಾ ಅಧಿಕಾರಿಗಳು, ಜನತಾ ಪ್ರತಿನಿಧಿಗಳು ಇರುವ ಒಂದು ಹೊಸ ಸಂಘಟನಾ ಸಮಿತಿಯನ್ನು ಪ್ರತಿ ಜಿಲ್ಲೆ, ಬ್ಲಾಕ್‌ಗಳಲ್ಲಿ 1985-86ರಲ್ಲಿ ರಚಿಸಲಾಯಿತು.

ಯೋಜನೆಗಾಗಿ ಹೊಸ ಸಂಘಟನೆ

ಪ್ರತಿ ಜಿಲ್ಲೆಯಲ್ಲಿ 'ಜಿಲ್ಲಾ ಯೋಜನಾ ಮತ್ತು ಸಂಯೋಜನಾ ಮಂಡಳಿ' ಇರುತ್ತದೆ. ಜಿಲ್ಲೆಯಿಂದ ಬಂದಿರುವ ರಾಜ್ಯ ಸರ್ಕಾರದ ಮಂತ್ರಿ ಇದರ ಅಧ್ಯಕ್ಷರಾಗಿದ್ದರೆ ಎಲ್ಲಾ ವಿಧಾನ ಸಭಾ ಸದಸ್ಯರು, ಲೋಕಸಭಾ ಸದಸ್ಯರು, ಜಿಲ್ಲಾ ಪರಿಷತ್‌ನ ಸಭಾಪತಿ, ಕಾರ್ಯಾಧ್ಯಕ್ಷ, ಪಂಚಾಯತ್ ಸಮಿತಿ ಸಭಾಪತಿಗಳು, ಎಲ್ಲಾ ಮುನಿಸಿಪಾಲಿಟಿ ಅಧ್ಯಕ್ಷರು ಮತ್ತು ಜಿಲ್ಲಾ ಹಂತದ ಎಲ್ಲಾ ಸರ್ಕಾರಿ ಇಲಾಖೆಗಳ ಮುಖ್ಯಸ್ಥರು ಸದಸ್ಯರಾಗಿರುತ್ತಾರೆ. ಡಿವಿಜನಲ್ ಕಮೀಶನರ್ ಆಮಂತ್ರಿತರು. ಜಿಲ್ಲಾ ಮ್ಯಾಜಿಸ್ಟ್ರೇಟ್ ಮಂಡಳಿಯ ಕಾರ್ಯದರ್ಶಿಗಳಾಗಿರುತ್ತಾರೆ. ಜಿಲ್ಲಾ ಯೋಜನಾ ಮಂಡಳಿ ಸರ್ವ ಸದಸ್ಯರ ಸಭೆ ತರಹ ಕೆಲಸ ಮಾಡಿದರೆ, ಜಿಲ್ಲಾ ಪರಿಷತ್ತಿನ ಸಭಾಪತಿಯ ಅಧ್ಯಕ್ಷತೆಯ ಜಿಲ್ಲಾ ಯೋಜನಾ ಸಮಿತಿ ಇದರ ಕಾರ್ಯಕಾರಿ ಅಂಗವಾಗಿರುತ್ತದೆ. ಯೋಜನಾ ಸಮಿತಿಗೆ ಇಂಜಿನಿಯರುಗಳು ಮತ್ತು ಸಮಾಜ ವಿಜ್ಞಾನಿಗಳ ತಜ್ಞರ ಸಮಿತಿಯ ಸಹಾಯ ವಿರುತ್ತದೆ.

ಬ್ಲಾಕ್ ಹಂತದಲ್ಲೂ ಇದೇ ರೀತಿಯ ಪಂಚಾಯತ್ ಸಮಿತಿಯ ಸಭಾಪತಿಯ ಅಧ್ಯಕ್ಷತೆಯ ಬ್ಲಾಕ್ ಯೋಜನಾ ಸಮಿತಿ ಇರುತ್ತದೆ. BDO ಇದರ ಕಾರ್ಯದರ್ಶಿಯಾಗಿರುತ್ತಾನೆ ಎರಡೂ ಹಂತದ ಸಮಿತಿಗಳಲ್ಲೂ ಜನತಾ ಪ್ರತಿನಿಧಿಗಳು ಬಹು ಸಂಖ್ಯಾತರಾಗಿರುತ್ತಾರೆ ಈ ಪ್ರತಿನಿಧಿಗಳ ಮೂಲಕ ಯೋಜನೆಗಳಲ್ಲಿ ಜನರು ಪಾಲುಗೊಳ್ಳುತ್ತಾರೆ.

ಯೋಜನೆಯ ತಯಾರಿ

ಯೋಜನೆಯ ತಯಾರಿಯ ಪ್ರಕ್ರಿಯೆ ರಾಜ್ಯ ಯೋಜನಾ ಮಂಡಳಿಯಿಂದ ಆರಂಭವಾಗುತ್ತದೆ. ಮಂಡಳಿ, ಮುಖ್ಯಮಂತ್ರಿ ಮತ್ತು ವಿವಿಧ ಇಲಾಖೆಗಳ ಜತೆ ಚರ್ಚಿಸಿ ರಾಜ್ಯ ಯೋಜನೆಯ ಮುಖ್ಯ ಕಾರ್ಯಕ್ರಮಗಳು ಆದ್ಯತೆಗಳು ಪ್ರಾಶಸ್ತ್ಯಗಳು ಮತ್ತು ಇವಕ್ಕೆ ಆರ್ಥಿಕ ಮೂಲಗಳನ್ನು ನಿರ್ಧರಿಸುತ್ತದೆ. ಈ ರಾಜ್ಯ ಯೋಜನೆಯ ಆಧಾರದ ಮೇಲೆ ಪ್ರತಿ ಜಿಲ್ಲೆಗೂ ವಿವಿಧ ಕಾರ್ಯಕ್ರಮಗಳಿಗೆ ಆರ್ಥಿಕ ಮೂಲಗಳನ್ನು ನಿರ್ಧರಿಸುತ್ತದೆ. ಆರ್ಥಿಕ ಮೂಲಗಳು ರಾಜ್ಯದ ಬಜೆಟ್ ಅಥವಾ NREP, IRDP ಮುಂತಾದ ವಿಶೇಷ ಕಾರ್ಯಕ್ರಮದ ನಿಧಿ. ಈ ಬಗ್ಗೆ ಜಿಲ್ಲಾ ಯೋಜನಾ ಮಂಡಳಿಗಳ ಜತೆ ವಿಚಾರ-ವಿಮರ್ಶೆ ನಡೆಯುತ್ತದೆ.

ರಾಜ್ಯ ಯೋಜನೆಯ ಆದ್ಯತೆಗಳಿಗನುಗುಣವಾಗಿ ಜಿಲ್ಲಾ ಯೋಜನಾ ಸಮಿತಿಗಳು ಜಿಲ್ಲಾ ಯೋಜನೆಯನ್ನು ತಯಾರಿಸುತ್ತವೆ. ಬ್ಲಾಕ್, ಮುನಿಸಿಪಾಲಿಟಿಗಳೊಂದಿಗೆ ಚರ್ಚಿಸಿ ಜಿಲ್ಲಾ, ಬ್ಲಾಕ್, ಮತ್ತು ನಗರ ಯೋಜನೆಗಳ ರೂಪುರೇಷೆ ತಯಾರಿಸುತ್ತದೆ. ಪ್ರತಿಯೊಂದು ಕ್ಷೇತ್ರದಲ್ಲಿ (ಉದಾ: ರಸ್ತೆ ನಿರ್ಮಾಣ) ಈ ಮೂರು ಯೋಜನೆಗಳು ಒಂದಕ್ಕೊಂದು ಪೂರಕವಾಗಿದ್ದು ಸುಸಂಬದ್ಧವಾಗಿರುವಂತೆ ನೋಡಿಕೊಳ್ಳಲಾಗುತ್ತದೆ. ಆರ್ಥಿಕ ಮೂಲಗಳನ್ನೂ ಇದೇ ರೀತಿ ನಿರ್ಧರಿಸಲಾಗುತ್ತದೆ.

ಉದಾಹರಣೆಗೆ ಜಿಲ್ಲಾ ರಸ್ತೆ ನಿರ್ಮಾಣಗಳು ಇಲಾಖಾ ಬಜೆಟ್‌ನಿಂದ, ಹಳ್ಳಿ ರಸ್ತೆಗಳು NREP RLEGP, ಕಾರ್ಯಕ್ರಮ ನಿಧಿಯಿಂದ ಹಣ ಒದಗಿಸಿಕೊಳ್ಳಬಹುದು. ಇಂತಹ ವಿವರವಾದ ಯೋಜನೆಯನ್ನು ಜಿಲ್ಲಾ ಯೋಜನಾ ಸಮಿತಿ ರಚಿಸಿ, ಜಿಲ್ಲಾ ಯೋಜನಾ ಮಂಡಳಿಯಿಂದ ಅಂಗೀಕೃತವಾಗುತ್ತವೆ. ಇದರ ಆಧಾರದ ಮೇಲೆ ಇದೇ ರೀತಿ ಬ್ಲಾಕ್ ಯೋಜನೆಗಳನ್ನು ಮಾಡಲಾಗುತ್ತಿದೆ.

ಜಿಲ್ಲಾ ಯೋಜನೆಗಳನ್ನು ರಾಜ್ಯ ಯೋಜನಾ ಮಂಡಳಿಗೆ ಕಳಿಸಲಾಗುತ್ತದೆ. ಇವು ರಾಜ್ಯ ಯೋಜನೆಯ ಆದ್ಯತೆಗಳಿಗೆ ತೀರಾ ವಿರುದ್ಧವಾಗಿರದ

(6ನೇ ಪುಟ ನೋಡಿ)

ಅಗ್ನಿವೃತ್ತವನ್ನು ಭೇದಿಸಿ ಜನ ಬಂದರು

ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಅನಂತಶಯನ ಗುಡಿ ಗ್ರಾಮ [ಹೊಸಪೇಟೆ ತಾಲ್ಲೂಕ್] ದಲ್ಲಿ ನಮ್ಮ ಪಕ್ಷಕ್ಕೆ ಹೆಚ್ಚು ಮತ ಬಿದ್ದಿದ್ದವು. ಹಾಲಿ ಜಿಲ್ಲಾ ಪರಿಷತ್ ಸದಸ್ಯರಾಗಿರುವ ಜನತಾದ ಅಯ್ಯಾಳಿ ತಿಮ್ಮಪ್ಪ ಇದೇ ಗ್ರಾಮದವರೇ. ಮಂಡಲ್ ಪಂಚಾಯತ್ ಚುನಾವಣೆಯಲ್ಲಿ ಕಮ್ಯುನಿಸ್ಟರು ಸ್ಪರ್ಧಿಸಬಾರದು, ತಮ್ಮವರೇ ಸದಸ್ಯರಾಗಬೇಕು, ಡಿ. ವೈ. ಎಫ್. ದವು. ಇದನ್ನು ಪಾಸ್ ಮಾಡದಂತೆ ಜಿಲ್ಲಾ ಪರಿಷತ್ ಸದಸ್ಯರಾದ ಅಯ್ಯಾಳಿ ತಿಮ್ಮಪ್ಪನವರು ಅಧಿಕಾರವಾಣಿಯಿಂದ ಆದೇಶಿಸಿದಂತೆ ನುಡಿದರು. ಆದರೂ ಮಂಡಲ್ ಪಂಚಾಯತ್ ಕಾನೂನಿನ ಅನ್ವಯ ನಮ್ಮ ನಾಮಪತ್ರಗಳು ವಾಪಸ್ ಆದವು.

ತಮ್ಮ ಸಂಚು ಬುಡಮೇಲಾದಾಗ ನಾಮಪತ್ರ ಹಿಂತೆಗೆದುಕೊಳ್ಳುವಂತೆ ಒತ್ತಡ, ಸರ್ವಪ್ರಯತ್ನ ನಡೆಯಿತು. ನಾನು ಒಂದು ಹಗಲು, ಒಂದು ರಾತ್ರಿ

ಸಂವಿಧಾನ ನಮ್ಮೆಲ್ಲರಿಗೆ ಮತಹಾಕುವ, ಚುನಾವಣೆಗಳಲ್ಲಿ ಹುರಿಯಾಳಾಗುವ ಸ್ವಾತಂತ್ರ್ಯ ನೀಡಿದೆ. ಅದಕ್ಕೆ ಇರುವ ಮಿತಿಗಳೇನು? ಕಾಂಗ್ರೆಸ್, ಜನತಾಪಕ್ಷಗಳ ಭೂಮಾಲೀಕ ಶಕ್ತಿಗಳ ಅಟ್ಟಹಾಸದ ಅನುಭವಗಳು. ಪರಿಷತ್ ಹಾಗೂ, ಮಂಡಲ ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಗಳಿಂದ

ಐ. ಬೆಳೆಯದಂತೆ ಪ್ರಾಂತ ರೈತಸಂಘ ನುಸುಳದಂತೆ ತಡೆಯಬೇಕೆಂದೇ ಅವರ ಉದ್ದೇಶವಾಗಿತ್ತು. ಈ ಹಿನ್ನೆಲೆಯಲ್ಲಿ ಅವಿರೋಧ ಆಯ್ಕೆಯೆಂದು ತಮ್ಮನ್ನು ತಾವೇ ಆರಿಸಿಕೊಂಡು ಊರಿನ ಯಜಮಾನರು ಕೆಲವರು ಕಾಂಗ್ರೆಸ್ಸಿನ ಮುಖಂಡರಾಗಿದ್ದು ಜನತಾ ಪಕ್ಷಕ್ಕೆ ಸೇರಿದವರು- ಹೆಂಡ ಕುಡಿದುಕೊಂಡೆ ತಮ್ಮ ಮಾತಿಗೆ ಹೊಂಗುಡುತ್ತಿದ್ದ ಕುಡುಕರ ಕಟ್ಟಿ ಪಂಚಾಯ್ತಿಯಲ್ಲಿ ತಾವು ಮಂಡಲ್ ಪಂಚಾಯತ್ ಸದಸ್ಯರೆಂದು ಘೋಷಿಸಿಕೊಂಡರು.

ನಾವು ಇದನ್ನು ವಿರೋಧಿಸಿದಾಗ ಊರಿನ ವಿರೋಧಿಗಳೆಂದು, ಗಡಿಪಾರು ಮಾಡುವುದಾಗಿ ಬೆದರಿಕೆ ಹಾಕಿದರು. ಪಕ್ಷದ ಆದೇಶದ ಮೇರೆಗೆ ನಾನು, ಕಾಂ॥ ರಾಮದಾಸ್, ಕಾಂ. ಶೇಷಗಿರಿ ಆಚಾರ್ ನಾಮಪತ್ರ ಸಲ್ಲಿಸಿ ರೈಲ್ವೇನಿಲ್ದಾಣದಲ್ಲಿ ಉಪವಾಸ ಮಲಗಿ ಹಿಂತೆಗೆದುಕೊಳ್ಳುವ ಅವಧಿ ಮುಗಿದ ನಂತರ ಊರಿಗೆ ಬಂದೆ. ನಂತರವೂ ಆಶೆ ಆಮಿಷ ತೋರಿಸಿ ಪ್ರತಿಸ್ಪರ್ಧಿ ಕಮ್ಯುನಿಸ್ಟ್ ಪಕ್ಷ ಬಿಟ್ಟು ತನ್ನ ಸಲುವಾಗಿ ಪ್ರಚಾರ ಮಾಡು ಎಂದು ಹೇಳಿದರು. ಇತರ ಸಂಗಾತಿಗಳಿಗೂ ಹೀಗೆ

ಭರಮಪ್ಪ

ಆಶೆ-ಆಮಿಷ ತೋರಿಸಿ ವಿಫಲರಾದರು. ನಮ್ಮ ಪಕ್ಷದ ಪ್ರಚಾರವನ್ನು ಆರಂಭಿಸಿದವು.

ಸಿ. ಪಿ. ಐ ನವರು ಜನತಾ ಪಕ್ಷಕ್ಕೆ ಬೆಂಬಲ ನೀಡಿದರು. ಜನತಾದವರು ನಮ್ಮನ್ನು ದ್ರೋಹಿಗಳೆಂದರು, ಗೂಂಡಾಗಳೆಂದರು; ಮತದಾರರ ಮನೆಗಳಿಗೆ ಹೋಗಿ ಜನತಾ ಪಕ್ಷಕ್ಕೇ ಮತ

[6ನೇ ಪುಟನೋಡಿ]

ಗೋಡೆಯ ಮೇಲೂ - ಜನರ ಹೃದಯದಲ್ಲೂ

ರೈತ ಸಂಘದ ಕಾರ್ಯಕರ್ತರ ತಂಡ ಲಾಡ-ಮುಗಳಿಯಿಂದ ಪ್ರಾರಂಭಿಸಿ 22-12-86 ಒಳಗಾಗಿ ಇಡೀಯಾಗಿ ಗೋಡೆ ಬರಹ ಮುಗಿಸಿದರು. ಮತಕ್ಷೇತ್ರದ ತುಂಬೆಲ್ಲಾ ಕೂಲಿಕಾರರ ಕಡುಗೋಲು ಈ ಸಲ ಎಲೆಕ್ಷನ್‌ಗೆ ನಿಂತಿದೆ ಎಂದು ಪ್ರಚಾರವೂ, ಪ್ರಚಾರ ವಿ.ಕೆ. ಸಲಗರದಲ್ಲಿ ಗೋಡೆ ಬರಹ ಬರೆಯಲು ವಿರೋಧಿಸಿದಾಗ, ರೈತ ಸಂಘದ ಮುಖಂಡರು ಮಧ್ಯಸ್ಥಿಕೆ ವಹಿಸಿ ಬರೆಯುವಂತೆ ಮಾಡಿದರು. ಗೋಡೆ ಬರಹದಲ್ಲಿ ಆಳಂದ ತಾಲ್ಲೂಕಿನಲ್ಲಿ 50ಕ್ಕೂ ಹೆಚ್ಚು ಜನ ಭಾಗವಹಿಸಿದರು.

(ಗೋಡೆ ಬರಹ ನೋಡಿ ಕಾಂಗ್ರೆಸ್ ಉಮೇದವಾರ ಆಗಲೇ ಪ್ರಚಾರ ತುಂಬಾ ಜೋರಾಗಿ ನಡೆದಿದೆ ಎಂದು ಕೇಳಿದ. ನಾವು ಕಾಲ್ನಡಿಗೆಯ ಜನ, ನಿಮ್ಮದು ತುಂಬಾ ಜೋರಾಗಿ ಇರುತ್ತದೆ ಎಂದು ನಾನು ಹೇಳಿದೆ. ನಾನು ಮುಂದಕ್ಕೆ ಹೋದಮೇಲೆ ರೈತ ಕಾರ್ಯಕರ್ತನ ಮುಂದೆ ನೀವು ಗೋಡೆ ಮೇಲೆ ಇದ್ದಿರೆಂದು ಹೇಳಿದನಂತೆ. ಆಗ ಸಂಗಾತಿ ಗೋಡೆ ಮೇಲಷ್ಟೆ ಇಲ್ಲ ನಿಮ್ಮ ತಲೆಮೇಲೆ ಇದ್ದೇವೆ, ಜನರ ಹೃದಯದಲ್ಲಿ ಇದ್ದೇವೆಂದು ಹೇಳಿದರಂತೆ)

ಚುನಾವಣೆಗೆ ಹಣ ಬೇಕು ಎಂದು ರೈತ-ಕೃಷಿಕಾರ್ಮಿಕರು ಮನದಟ್ಟು

ಮಾರುತಿ ಮಾನ್ಪಡೆ

ಮಾಡಿಕೊಟ್ಟಾಗ ತಲೆಗೆ ಒಂದಿಷ್ಟು ಹಾಕಿಕೊಳ್ಳೋಣ ಎಂದು ನೀವು ಹೆದರೋದು ಬೇಡ ಎಂದು ಹೇಳಿದರು ಅದರಂತೆ 1ರೂಪಾಯಿಂದ 500ರೂಪಾಯಿಗಳವರೆಗೆ ಹಣ ನೀಡಿ ಇಡೀ ಚುನಾವಣೆಗೆ ಬೇಕಾಗುವ ಹಣ 11 ಹಳ್ಳಿಗಳಲ್ಲಿ ಸಂಗ್ರಹಿಸಿದರು. ಮುರಡಿಯಲ್ಲಿ ಹೋದ ಚುನಾವಣೆಯಲ್ಲಿ ಹಣ ತೆಗೆದುಕೊಂಡು ಓಟು ಕೊಟ್ಟಿದ್ದರೆ ಈಸಲ 1750 ಸಂಗ್ರಹಿಸಿದರು.

ಪಕ್ಷದ ಘಟಕದ ಕಾರ್ಯದರ್ಶಿ ವಲಸೆಹೋಗಿ ಮುಂಬೈಯಲ್ಲಿರುವವರಿಗೆ ಕಾಗದ ಬರೆದರೆ 850ರೂ ಕಳುಹಿಸಿದರು. ಪ್ರತಿಸಲ ಹಳ್ಳಿಯಲ್ಲಿ ನಿಧಿ ಸಂಗ್ರಹಿಸುವುದರಿಂದ ಹೆಚ್ಚಿಗೆ ಭಾರ ಆಗುತ್ತದೆ ಎಂದು ಮುಂಬೈಯಲ್ಲಿರುವ ಹಿತೈಷಿಗಳಿಂದ 1500ರೂ ಸಂಗ್ರಹಿಸಿದರು ತೆಂಗಾಟ ಗ್ರಾಮದ ಕಾರ್ಯಕರ್ತರು.

ಕೆಲವು ಜನ ಹಿತೈಷಿಗಳು 10ರಿಂದ 500 ವರೆಗೆ ಸಂಗ್ರಹಿಸಿ ಪ್ರಚಾರಕ್ಕೆ ಜೀಪ್‌ತರಲು ಹೈದ್ರಾಬಾದಕ್ಕೆ ಕಳುಹಿದರು. ಜೀಪ್ ಬರುವುದರೊಳಗೆ ಬಸವರಾಜ ಪಾಟೀಲ್ ಅಟ್ಟೂರ ಅವರ ಒತ್ತಡಕ್ಕೆ ಮಣಿದು ಜನತಾ ಪಕ್ಷದ ಹಿಂದೆ ಹೋದರು. ಆದರೆ ಗ್ರಾಮದ ಜನತೆ ಸಿ.ಪಿ.ಐ.[ಎಂ] ಪರ ದೃಢ ನಿಲುವು ತಳೆಯಿತು.

ಪ್ರಚಾರ ಯಾವ ಗ್ರಾಮದಲ್ಲಿಯೂ ಕೂಡಾ ಚಹಾ ನಾಷ್ಟಾ ಇತ್ಯಾದಿಗಳ

[6ನೇ ಪುಟ ನೋಡಿ]

ಜಿಲ್ಲಾ ಪರಿಷತ್ ವ್ಯವಸ್ಥೆ : ಕರ್ನಾಟಕ ಹಾಗೂ ಪಶ್ಚಿಮ ಬಂಗಾಳ

ಇಂದು ಕರ್ನಾಟಕದಲ್ಲಿ ಎಲ್ಲೆಡೆಯಲ್ಲಿಯೂ ಜಿಲ್ಲಾ ಪರಿಷತ್ ವ್ಯವಸ್ಥೆಯ ಬಗ್ಗೆ ಮಾತೇ ಮಾತು. ಜನತಾ ಸರ್ಕಾರದವರು ಅಧಿಕಾರ ವಿಕೇಂದ್ರೀಕರಣವನ್ನು ಸಂಪೂರ್ಣವಾಗಿ ಮಾಡಿಯೇ ಬಿಟ್ಟೆವೆಂದು ಬಹಳ ದೊಡ್ಡ ಪ್ರಚಾರ ನಡೆಸಿದ್ದಾರೆ. ಜಿಲ್ಲಾ ಪರಿಷತ್ ವ್ಯವಸ್ಥೆ ಕರ್ನಾಟಕದಲ್ಲಿ ಹಿಂದಿದ್ದ ಪಂಚಾಯಿತಿ-ತಾಲ್ಲೂಕು ಬೋರ್ಡ್ ವ್ಯವಸ್ಥೆಗಿಂತ ಒಂದು ಹೆಜ್ಜೆ ಮುಂದಾಗಿದೆ. ಹೆಚ್ಚಿನ ಅಧಿಕಾರವನ್ನು ಈ ಗ್ರಾಮೀಣ ಆಡಳಿತ ಸಂಸ್ಥೆಗಳಿಗೆ ವಹಿಸಲಾಗಿದೆ, ವಹಿಸಲಾಗುತ್ತಿದೆ ಎಂಬ ಮಾತಂತೂ ನಿಜ.

ಅಧಿಕಾರ ವಿಕೇಂದ್ರೀಕರಣ ಎಂದರೇನು ಯಾವ ರೀತಿಯ ಅಧಿಕಾರ ವಿಕೇಂದ್ರೀಕರಣವನ್ನು ಕರ್ನಾಟಕದಲ್ಲಿ ಮಾಡಲಾಗಿದೆ ? ಪ. ಬಂಗಾಳದಲ್ಲಿ ಅತಿ ಯಶಸ್ವಿಯಾಗಿರುವ ಆಡಳಿತ ವಿಕೇಂದ್ರೀಕರಣಕ್ಕೂ ಈ ಅಧಿಕಾರ ವಿಕೇಂದ್ರೀಕರಣಕ್ಕೂ ಸಾಮ್ಯವಿದೆಯೇ? ಈ ಪ್ರಶ್ನೆಗಳು ಈ ಚುನಾವಣೆಗಳು ನಡೆದ ವೈಖರಿಯನ್ನು, ಆರಿಸಿ ಬಂದ ಪ್ರತಿನಿಧಿಗಳನ್ನು ನೋಡಿದಾಗ ಅನೇಕರ ಮನಸ್ಸಿನಲ್ಲಿ ಮೂಡಿಬರುತ್ತಿವೆ.

ಈ ಸಂದರ್ಭದಲ್ಲಿ ನಾವು ಈ ಹಿಂದೆ "ಐಕ್ಯರಂಗ"ದ ಕನ್ನಡ ರಾಜ್ಯೋತ್ಸವ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿದ್ದ ಒಂದು ಮಾತು ನೆನಪಿಗೆ ಬರುತ್ತಿದೆ. ಹೆಗಡೆಯವರು 1983 ರಲ್ಲಿ ಅಧಿಕಾರಕ್ಕೆ ಬಂದ ಕೂಡಲೆ ಅತಿ ಉತ್ಸಾಹದಿಂದ ರಚಿಸಿದ "ಥಿಂಕ್ ಟ್ಯಾಂಕ್" ಅಥವಾ ಪರಿಣಿತರ ಕೂಟಕ್ಕಾಗಿ ಜನತಾ ಸರ್ಕಾರವೇ ತಯಾರಿಸಿದ ಒಂದು ವರದಿ ಹೇಳುತ್ತದೆ :

ಭೂಮಿಯೇ ಗ್ರಾಮೀಣ ಆರ್ಥಿಕದ, ಜನಜೀವನದ ಮೂಲಾಧಾರವಾಗಿರುವಾಗ ಭೂಮಿಯ ಹಂಚಿಕೆಯಿಂದ ಮಾತ್ರ ಎಲ್ಲರೂ ಭಾಗವಹಿಸಬಹುದಾದ ಪ್ರಜಾಸತ್ತೆಯನ್ನು ಊರ್ಜಿತಗೊಳಿಸಲು ಸಾಧ್ಯ. ಅತೀವ ಅಸಮಾನತೆಯ ಸಮಾಜದಲ್ಲಿ ಗ್ರಾಮೀಣಾಭಿವೃದ್ಧಿ ಕಾರ್ಯದಲ್ಲಿ ಪಂಚಾಯತಿ ಮೊದಲಾದ ಸಂಸ್ಥೆಗಳನ್ನು ಒಳಗೊಳ್ಳುತ್ತವೆ ಎಂಬ ಮಾತಿಗೆ ಅರ್ಥವೇ ಇಲ್ಲ" ಈ ಪಂಚಾಯತಿಗಳು ದೊಡ್ಡ ಜಮೀನುದಾರರ ಸೃಷ್ಟಿಯಾಗಿ ಪರಿಣಮಿಸುತ್ತದೆ"

ಇದು ಜನತಾ ಸರ್ಕಾರದ ವರದಿಯೇ ಜಿಲ್ಲಾ ಪರಿಷತ್ ಚುನಾವಣೆಗಳಿಗೆ ಬಹಳ ಮೊದಲೇ ನುಡಿದ ಭವಿಷ್ಯ. ಈ ಮಾತು ನೂರಕ್ಕೆ ನೂರು ನಿಜವಾಗಿರುವುದನ್ನು ನಾವು ನೋಡಬಹುದು. ಮಂಡಲ ಪಂಚಾಯತಿ, ಜಿಲ್ಲಾ ಪರಿಷತ್ ಚುನಾವಣೆಗಳಲ್ಲಿನ ನಮ್ಮ ಸಂಗಾತಿಗಳ ಅನುಭವ ಸ್ಪಷ್ಟಪಡಿಸುತ್ತಿದೆ. ಸರ್ವ ತಂತ್ರ ಸ್ವತಂತ್ರವಾದ ಭಾರತದಲ್ಲಿ ಬಡ ಗ್ರಾಮೀಣನೊಬ್ಬ ತನ್ನ ಇಚ್ಛೆಯಂತೆ ಮತ ಚಲಾಯಿಸಲು ಸಾಧ್ಯವೇ ? ತನ್ನ ಹಿತಸಾಧನೆ ಯಾವುದರಿಂದ ಸಾಧ್ಯ ಎಂಬ ಬಗ್ಗೆ ಸ್ವತಂತ್ರವಾಗಿ ಯೋಚನೆ ಮಾಡಿ ತನ್ನ ಮನಸ್ಸಿನಂತೆ ಮತ ಚಲಾಯಿಸಲು ಸಾಧ್ಯವೇ ? ಬಡವನೊಬ್ಬನ ಮತ ಚಲಾವಣೆಯ ಸ್ವಾತಂತ್ರ್ಯ, ಒಂದು ಕಡೆ ಹಣ-ಹೆಂಡ, ಮತ್ತೊಂದು ಕಡೆ ಜಾತಿ ಮುಖಂಡರ ಊರ ಮುಖಂಡರ ಪ್ರಭಾವ, ಪ್ರಭಾವಕ್ಕೆ ನಯವಾಗಿ ಹೇಳುವುದಕ್ಕೆ ಮಣಿಯದಿದ್ದರೆ ಬೆದರಿಕೆ ಕೊನೆಗೆ ಹಿಂಸಾಚಾರ ಇವುಗಳಿಂದ ಸೀಮಿತ ಸ್ವಾತಂತ್ರ್ಯವಾಗಿ ಬಿಡುತ್ತದೆ. ರಿಗ್ಗಿಂಗ್ ಎಂಬುದಂತೂ ಮತ ಚಲಾವಣೆಯ ಸ್ವಾತಂತ್ರ್ಯವನ್ನು ಎಲ್ಲಾ ರೀತಿಯಿಂದ ಕಸಿಯುವ ತಂತ್ರ. ಹೀಗಾಗಿ ಭಾರತ ಸ್ವಾತಂತ್ರ್ಯವಾಗಿ, 10-12 ಚುನಾವಣೆಗಳಲ್ಲಿ ನಮ್ಮ ಮತದಾರ ಮತ ಚಲಾಯಿಸಿದ ನಂತರವೂ ಅವರ ಮತ ಚಲಾವಣೆಯ ಸ್ವಾತಂತ್ರ್ಯ ಎಷ್ಟು ಸಡಿಲವಾಗಿದೆ, ದುರ್ಬಲವಾಗಿದೆ ಎಂಬುದನ್ನು ಎತ್ತಿ ತೋರಿಸುತ್ತದೆ.

ಇಂತಹ ಪರಿಸ್ಥಿತಿಯಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸುವವರು ಯಾರು, ಮತ ಪಡೆಯುವವರು ಯಾರು, ಗೆಲ್ಲುವವರು ಯಾರು ?

ಸಾಮಾನ್ಯವಾಗಿ ಭಾರತದ ಭೂಮಾಲಕ ಬಂಡವಾಳಶಾಹಿ ಪಕ್ಷಗಳು ತಮ್ಮ ಚಿಹ್ನೆಯ ಮೇಲೆ ಅಧಿಕೃತ ಸ್ಪರ್ಧಿಯನ್ನು ನಿಲ್ಲಿಸಿ ಹಳ್ಳಿಗಳ ಜನರನ್ನು ರಾಜಕೀಯವಾಗಿ ಎಚ್ಚರಗೊಳಿಸುವ ಕೆಲಸ ಮಾಡುವುದಕ್ಕೇ ಅಂಜಿದ್ದವು.

ದೇಶದಲ್ಲಿ ಮೊತ್ತ ಮೊದಲ ಬಾರಿಗೆ ಪಂಚಾಯತಿ ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳು ಸ್ಪರ್ಧಿಸಿದ್ದು 1978 ರ ಜೂನ್ ನಾಲ್ಕರಲ್ಲಿ ಪ. ಬಂಗಾಳದ ಜಿಲ್ಲಾ ಪರಿಷತ್ ಚುನಾವಣೆಗಳು ನಡೆದಾಗಲೇ ಕರ್ನಾಟಕದಲ್ಲಿ ಮೊದಲ ಬಾರಿಗೆ ಚುನಾವಣಾ ಚಿಹ್ನೆಯನ್ನು ತೆಗೆದುಕೊಂಡು ಹೋದದ್ದು ಪಶ್ಚಿಮ ಬಂಗಾಳದ ಪ್ರಭಾವವೇ.

ಆದರೆ ಬಡವರಿಗೆ ಚುನಾವಣೆಯಲ್ಲಿ ಮತ ನೀಡಲು ಸ್ವಾತಂತ್ರ್ಯವಿಲ್ಲವೆಂದ ಮೇಲೆ ಚುನಾವಣೆಯಲ್ಲಿ ನಿಲ್ಲಲು ಸ್ವಾತಂತ್ರ್ಯವಿದೆಯೇ ? ಲಕ್ಷಗಟ್ಟಲೆ ಹಣ ಸುರಿಯುವ ಪ್ರತಿಸ್ಪರ್ಧಿ ಭೂಮಾಲಕ, ಶ್ರೀಮಂತ ರೈತರ ಎದುರು ಒಬ್ಬ ಕೃಷಿ ಕಾರ್ಮಿಕ ಗೆಲ್ಲಲು ಸಾಧ್ಯವೇ ? ಅವಿರೋಧವಾಗಿ ಆಯ್ಕೆಯಾದ ಅಭ್ಯರ್ಥಿಗಳ ಸಂಖ್ಯೆಯನ್ನು

ಇಂದು ನಮ್ಮ ದೇಶದ ಜಿಲ್ಲಾ ಪರಿಷತ್ ವ್ಯವಸ್ಥೆಯಲ್ಲಿ ಎರಡು ಸ್ಪಷ್ಟ ಮಾದರಿಗಳಿವೆ ಒಂದು, ಮಹಾರಾಷ್ಟ್ರ ಗುಜರಾತ್ ಆಂಧ್ರದಲ್ಲಿರುವ ಮಾದರಿ ಮತ್ತೊಂದು ದೇಶಕ್ಕೇ ಕಣ್ಣಾದ ಪ. ಬಂಗಾಳದ ಮಾದರಿ. ಕನಾಟಕದ ಜನತಾ ಜಿಲ್ಲಾ ಪರಿಷತ್ ಸಾಗುತ್ತಿರುವ ದಾರಿ ಯಾವುದು

ನೋಡಿದರೆ ಸಾಕು ಚುನಾವಣೆಯಲ್ಲಿ ನಿಲ್ಲುವ ಸ್ವಾತಂತ್ರ್ಯ ಎಷ್ಟು ಜನಕ್ಕಿದೆ ಎಂಬುದು ಸ್ಪಷ್ಟವಾಗುತ್ತದೆ. ರಾಜ್ಯದಲ್ಲಿ ಎಲ್ಲೆಲ್ಲಿ, ಪಾಳೆಯಗಾರಿ ಭೂಮಾಲೀಕತ್ವ ಪ್ರಬಲವಾಗಿದೆಯೋ ಭೂಕೇಂದ್ರೀಕರಣ ಅತ್ಯಂತ ತೀಕ್ಷ್ಣವಾಗಿದೆಯೊ ಅಲ್ಲಿ ಕಾಲುಭಾಗದಷ್ಟು ಸ್ಥಾನಗಳು ಅವಿರೋಧ ಆಯ್ಕೆ. ಉದಾ : ಗುಲ್ಬರ್ಗಾ, ಬಿಜಾಪುರ, ಬೆಳಗಾಂ, ರಾಯಚೂರು ಜಿಲ್ಲೆಗಳು ಭೂಮಿಯ ಮೇಲೆ ಪ್ರತಿಷ್ಠಿತ ಶಕ್ತಿಗಳ ಹಿಡಿತ ಇತರೆಡೆಗಳಿಗೆ ಹೋಲಿಸಿದಾಗ ಕಡಮೆ ಇರುವ ಕಡೆ, ರಾಜಕೀಯ ಪ್ರಜ್ಞೆ ಹೆಚ್ಚಿರುವ ಕಡೆಗಳಲ್ಲಿ ದ. ಕ., ಬೆಂಗಳೂರು, ಕೋಲಾರ, ತುಮಕೂರುಗಳಲ್ಲಿ ಅವಿರೋಧ ಆಯ್ಕೆಯ ಪ್ರಮಾಣ ಕಡಿಮೆ.

ಹೀಗೆ ಚುನಾವಣೆಯಲ್ಲಿ ನಿಲ್ಲುವ ಸ್ವಾತಂತ್ರ್ಯ ತನ್ನ ಮನಸ್ಸಿನಂತೆ ಮತ ನೀಡುವ ಸ್ವಾತಂತ್ರ್ಯದಿಂದ ವಂಚಿತರಾದ ಸಾಮಾನ್ಯ ಜನತೆಗೆ ಅಧಿಕಾರ ಬಂದಂತಾಯಿತೆ ? ಅಧಿಕಾರ ವಿಕೇಂದ್ರೀಕರಣವಾಯಿತೆ ? ಆಸ್ತಿಯ ವಿಕೇಂದ್ರೀಕರಣವಾಗಿದೆ. ಅಧಿಕಾರ ವಿಕೇಂದ್ರೀಕರಣವಾಗದು ಎಂಬುದಕ್ಕೆ ಇದು ಒಳ್ಳೆಯ ಸೂಚನೆ.

ಇನ್ನು ಪಶ್ಚಿಮ ಬಂಗಾಳದಲ್ಲಿನ ಪರಿಸ್ಥಿತಿ ಏನು ?

ಪ. ಬಂಗಾಳದಲ್ಲಿ ಜಿಲ್ಲಾ ಪರಿಷತ್ ವ್ಯವಸ್ಥೆ ಅತ್ಯಂತ ಯಶಸ್ವಿಯಾಗಿ ಕೆಲಸ ಮಾಡಿರುವುದರ ಗುಟ್ಟೇನು ?

ಇದು ಒಮ್ಮೆ ನಾನು ಕಾಂ. ಬಿನೊಯ್ ಚೌಧುರಿ (ಪ. ಬಂಗಾಳದ ಭೂಸುಧಾರಣೆ, ಗ್ರಾಮೀಣ ಅಭಿವೃದ್ಧಿಗಳ ಸಚಿವರು,) ಯವರಿಗೆ ಹಾಕಿದ ಪ್ರಶ್ನೆ ಅದಕ್ಕೆ ಅವರ ಉತ್ತರವೇನಿತ್ತು ಗೊತ್ತೆ?

ಪ. ಬಂಗಾಳದ ಯಶಸ್ಸಿಗೆ ಮುಖ್ಯವಾದದು ಮೂರು ಕಾರಣಗಳು.

1. ನಿರಂತರವಾಗಿ ರೈತರ ಸಮಸ್ಯೆಗಳಿಗಾಗಿ, ಗ್ರಾಮಾಂತರದ ಅಭಿವೃದ್ಧಿಗಾಗಿ ಮಾಡುತ್ತಾ ಬಂದಿರುವ ಹೋರಾಟ. ತೇಭಾಗ ಹೋರಾಟಕ್ಕೆ ಮೊದಲೇ ಆರಂಭವಾಗಿದ್ದ 40 ವರ್ಷಗಳದೀರ್ಘ ಹೋರಾಟ.

2. ಈ ದೀರ್ಘ ಹೋರಾಟದ ಫಲವಾಗಿ 67-69ರ ಅವಧಿಯಲ್ಲಿ ಹಾಗೂ 77ರ ನಂತರ ತಂದ ಭೂಸುಧಾರಣೆ. ಇದರ ಫಲವಾಗಿ ಭೂಮಾಲೀಕ ಶಕ್ತಿಗಳ ಪ್ರಭಾವ ಕುಗ್ಗಿದ್ದು ಆಸ್ತಿಯ ಹಂಚಿಕೆಯೂ ಆಗಿದ್ದು.

ನೋಡಿ-ಪಟ್ಟಿ-1

ಕರ್ನಾಟಕದಲ್ಲಿ ಒಂದು ಹೆಕ್ಟೇರ್ [2·5 ಎಕರೆ] ಭೂಮಿಗಿಂತ ಕಡಿಮೆ ಭೂಮಿಯುಳ್ಳವರ ಸಂಖ್ಯೆ 34·4ಶೇ ಪಶ್ಚಿಮ ಬಂಗಾಳದಲ್ಲಿ ಅವರ ಸಂಖ್ಯೆ ಶೇ 69·7 ಈ ವರ್ಗದ ಕೈಯಲ್ಲಿರುವ ಭೂಮಿ ಕರ್ನಾಟಕದಲ್ಲಿ ಕೇವಲ ಶೇ 6·2ರಷ್ಟು ಪ. ಬಂಗಾಳದಲ್ಲಿ29·2 ಶೇ ರಷ್ಟು ಈ ಬಡ ರೈತರ ಕೈಯಲ್ಲಿ. ಗಮನಾರ್ಹವಾದುದೆಂದರೆ ಹತ್ತು ಎಕರೆಗಿಂತ ಹೆಚ್ಚು ಭೂಮಿಯುಳ್ಳವರ ಸಂಖ್ಯೆ ಕರ್ನಾಟಕದಲ್ಲಿ ಶೇ 5ಕ್ಕಿಂತ ಕಡಿಮೆಯಾದರೂ ಅವರ ಹಿಡಿತದಲ್ಲಿರುವ ಭೂಮಿ ಶೇಖಡಾ 24·4 ಒಟ್ಟು ಭೂಮಿಯ ಕಾಲು ಭಾಗದಷ್ಟು. ಭೂಮಾಲೀಕರ ಹಿಡಿತದಲ್ಲಿ ಇಷ್ಟರ ಮೇಲೂ ಮನೆಮಂದಿಯ ಹೆಸರಲ್ಲಿ ಕೆಲವೊಮ್ಮೆ ಸತ್ತವರ ಹೆಸರಲ್ಲಿ ಇನ್ನೂ ಹುಟ್ಟದವರ ಹೆಸರಿನಲ್ಲಿ ಇರುವ ಭೂಮಿಯನ್ನೆಲ್ಲಾ ಸೇರಿಸಿದರೆ ಇನ್ನು ಎಷ್ಟು ಭೂಮಿಯಾಗುವುದೋ ಯಾರು ಹೇಳ ಬಲ್ಲರು? ಆದರೆ ಪಶ್ಚಿಮ ಬಂಗಾಲದಲ್ಲಿ 10 ಹೆಕ್ಟೇರ್‌ಗಿಂತ ಹೆಚ್ಚು ಭೂಮಿಯಿರುವವರೂ ಇಲ್ಲವೇ ಇಲ್ಲ. 4ರಿಂದ 10ಹೆಕ್ಟೇರ್ ಭೂಮಿಯಿರುವವರೂ ಕೂಡಾ ಕೇವಲ ಶೇ2 ಕ್ಕಿಂತ ಕಡಿಮೆ.

3. ಪಂಚಾಯತಿ, ಜಿಲ್ಲಾಪರಿಷತ್‌ಗಳಲ್ಲಿ1978ರ ಚುನಾವಣೆಗಳಲ್ಲಿ ಶೇ 71ಭಾಗ,1983ರ ಚುನಾವಣೆಯಲ್ಲಿ ಶೇ85 ಭಾಗದ ಸದಸ್ಯರು 5ಎಕರೆಗಿಂತ ಕಡಿಮೆ ಭೂಮಿಯುಳ್ಳವರು ಬಡ ರೈತರು ಕೃಷಿ ಕೂಲಿಕಾರರು.

ಪಟ್ಟಿ-2 ನೋಡಿ

ಇದೇ ಮೂಲಶಕ್ತಿ. ಒಬ್ಬ ಗ್ರಾಮೀಣ ಬಡವ, ಕೃಷಿ ಕಾರ್ಮಿಕ ಹತ್ತಾರು ಎಕರೆ ಆಸ್ತಿಯುಳ್ಳವರ ಜೊತೆ ತಲೆಯೆತ್ತಿ ಸಮಾನನಂತೇ ವ್ಯವಹರಿಸಬಹುದಾದ ಶಕ್ತಿ. ಆದರೆ ಕರ್ನಾಟದಲ್ಲಿ ಭೂಮಾಲೀಕರು ಶ್ರೀಮಂತ ರೈತರ ಪಾಳೆಯಪಟ್ಟುಗಳಾಗಿ ಪರಿವರ್ತಿತವಾದ ಜಿಲ್ಲಾ ಪರಿಷತ್ ವ್ಯವಸ್ಥೆ ಯಾವ ರೀತಿಯಲ್ಲಿ ಕಾರ್ಯ ನಿರ್ವಹಿಸಬಹುದು.

ಪಶ್ಚಿಮ ಬಂಗಾಳದ ಜಿಲ್ಲಾ ಪರಿಷತ್ ವ್ಯವಸ್ಥೆಯ ಕಾನೂನು ಪಾಸಾಗಿದ್ದು 1973 ರಲ್ಲಿ, ಕಾಂಗ್ರೆಸ್ ಆಡಳಿತದಲ್ಲಿ ಆದರೆ ಕಾಂಗ್ರೆಸ್ ಸರಕಾರ ಈ ಜಿಲ್ಲಾ ಪರಿಷತ್ ವ್ಯವಸ್ಥೆಯನ್ನು ಜಾರಿಗೆ ತರಲಿಲ್ಲ. 20 ವರ್ಷಗಳ ಕಾಲ ಚುನಾವಣೆಯನ್ನೇ ನಡೆಸಲಿಲ್ಲ. ಸರಿ ಸುಮಾರು ಅದೇ ಸಮಯಕ್ಕೆ ಮಹಾರಾಷ್ಟ್ರ, ಗುಜರಾತ್, ಆಂಧ್ರ ಮೊದಲಾದ ರಾಜ್ಯಗಳಲ್ಲಿ ಜಿಲ್ಲಾ ಪರಿಷತ್ ವ್ಯವಸ್ಥೆಗಳು ಜಾರಿಗೆ ಬಂದವು. ಈಗ ನಮ್ಮ ದೇಶದಲ್ಲಿ ಎಡರಂಗ ಸರಕಾರ ಜಾರಿಗೆ ತಂದಿರುವ ಜಿಲ್ಲಾ ಪರಿಷತ್ ವ್ಯವಸ್ಥೆಯ ಮಾದರಿ ಒಂದು ಕಡೆಗೆ ಈ ಕಾಂಗ್ರೆಸ್ (ಐ) ಸರಕಾರಗಳು ಜಾರಿಗೆ ತಂದಿರುವ ಜಿಲ್ಲಾ ಪರಿಷತ್ ವ್ಯವಸ್ಥೆ ಒಂದು ಕಡೆಗೆ ಕಾಂಗ್ರೆಸ್ (ಐ) ಸರಕಾರಗಳಿರುವೆಡೆಗಳಲ್ಲಿ ಅಧಿಕಾರದ ಪೈಪೋಟಿಯಲ್ಲಿ ಇನ್ನಷ್ಟು ಹೆಚ್ಚು ಜನಕ್ಕೆ ಸ್ಥಾನ ಕೊಡಲು ಜಿಲ್ಲಾ-ಪರಿಷತ್‌ಗಳು ಆಶ್ರಯತಾಣಗಳಾಗಿವೆಯೇ ಹೊರತು ಮತ್ತೇನೂ ಇಲ್ಲಾ. ಈ ಯಾವ ರಾಜ್ಯಗಳಲ್ಲಿಯೂ ಭೂ ಸುಧಾರಣೆ ಮಂಡಲ ಪಂಚಾಯ್ತಿಗಳ ಅಧೀನದಲ್ಲಿಲ್ಲ. ಪಂಚವಾರ್ಷಿಕ ಯೋಜನೆಗಳ ನಿರೂಪಣೆಯ ಬಗ್ಗೆ ಮಾತಿಲ್ಲ. ಪ. ಬಂಗಾಳದಲ್ಲಿ ಜಿಲ್ಲಾ ಪರಿಷತ್ ವ್ಯವಸ್ಥೆಗೆ ಶಕ್ತಿ ನೀಡಿರುವುದೇ ಭೂಸುಧಾರಣೆಗೆ ಸಂಬಂಧಿಸಿದ ಕಾರ್ಯ ಅವುಗಳ ಜೊತೆಯಲ್ಲಿ ಅಭಿವೃದ್ಧಿ ಕಾರ್ಯಗಳು ಅಭಿವೃದ್ಧಿ ಕಾರ್ಯಗಳಲ್ಲಿನ ಕಾಮಗಾರಿಗಳೆಲ್ಲಾ ಪಂಚಾಯ್ತಿ ಸದಸ್ಯರುಗಳ ನೇತೃತ್ವದಲ್ಲಿ ನಡೆ

[7ನೇ ಪುಟ ನೋಡಿ]

ಪಟ್ಟಿ-1

ಭೂ ಒಡೆತನ ಪ. ಬಂಗಾಳ ಹಾಗೂ ಕರ್ನಾಟಕ

ವರ್ಗ	ಹಿಡುವಳಿದಾರರ ಸಂಖ್ಯೆ ಪ್ರಮಾಣ		ವಿವಿಧ ವರ್ಗದ ಭೂಮಿಯ ಮೇಲಿನ ಹಿಡಿತ	
	ಕರ್ನಾಟಕ	ಪ.ಬಂಗಾಲ	ಕರ್ನಾಟಕ	ಪ. ಬಂಗಾಲ
2.50ಎಕ್ಕರೆಗಿಂತಕಡಿಮೆ	34.4	69.7	6 2	29.2
2 50ರಿಂದ 5ಎಕ್ಕರೆ	24.5	19.6	13.2	31.2
5.00ರಿಂದ 10ಎಕ್ಕರೆ	21.3	8.8	21.9	25.2
10ರಿಂದ 25 ಎಕ್ಕರೆ	15.5	1.9	34.2	10.7
25 ಕ್ಕಿಂತ ಹೆಚ್ಚು	4 3	—	24.4	—

ಪಟ್ಟಿ 2

1978ರ ಚುನಾವಣೆಗಳಲ್ಲಿನ ಜಿಲ್ಲಾ ಪರಿಷತ್, ಗ್ರಾಮ ಪಂಚಾಯತಿ ಸದಸ್ಯರ ಭೂ ಹಿಡುವಳಿಗಳ

ವಿಸ್ತೀರ್ಣ	ಶೇ ಸದಸ್ಯರು
2 ಎಕರೆಗಿಂತ ಕಡಿಮೆ	42.9
2 ರಿಂದ 5 ಎಕರೆ	28.2
5 ರಿಂದ 8 ಎಕರೆ	13.0
8 ರಿಂದ 10 ಎಕರೆ	8.1
ಹತ್ತು ಎಕರೆಗಿಂತ ಹೆಚ್ಚು	7.8

ಚುನಾವಣೆ ಎಂಬ ಹೋರಾಟ - ಮಾರುತಿ ಮಾನ್ಪಡೆ

(4ನೇ ಪುಟದಿಂದ)

ಗಾಗಿ ಖರ್ಚುಮಾಡುವುದಕ್ಕೆ ಅಲ್ಲಿಯ ರೈತ-ಕೃಷಿಕಾರ್ಮಿಕರು ಅವಕಾಶ ಕೊಡಲಿಲ್ಲ.

ಚುನಾವಣಾ ಪ್ರಚಾರವು ಮೂರು ಹಂತಗಳಲ್ಲಿ ನಡೆಯಿತು. ಪಕ್ಷದ ಮುಖಂಡರು, ರೈತಸಂಘದ ಮುಖಂಡರು ಗ್ರಾಮದ ಬೇರೆ ಬೇರೆ ಜನ ವಿಭಾಗದ ಮುಖಂಡರಿಗೆ ಭೇಟಿ ಮಾಡಿ ತಿಳಿಸುವುದು. ಬೇರೆ ಪಕ್ಷಕ್ಕೂ ನಮ್ಮ ಪಕ್ಷಕ್ಕೂ ವ್ಯತ್ಯಾಸ, ಎಡರಂಗ ಸರ್ಕಾರದ ಸಾಧನೆ, ಏಳು ವರ್ಷಗಳ ಹಿಂದೆ ಅಧಿಕಾರ ವಿಕೇಂದ್ರಿಕರಣ ತಂದದ್ದು ರೈತ ಸಂಘದಿಂದ ನಡೆಸಿದ ಹೋರಾಟಗಳು ಇತ್ಯಾದಿ.

ಇನ್ನೊಂದು ಸಾಮೂಹಿಕ ಪ್ರಚಾರ:-

ಬಹಿರಂಗ ಸಭೆ, ಗುಂಪು ಸಭೆ, ಗೋಡೆ ಬರಹ, ಕರ ಪತ್ರ, ಹಾಡು, ಘೋಷಣೆಲ್ಲಿಯು 10ರಿಂದ 15ವರ್ಷದ ಮಕ್ಕಳ ಘೋಷಣೆ ಕೂಗುತ್ತಾ ಮೆರವಣಿಗೆ ತಪ್ಪದೆ ನಡೆಯುತ್ತಿತ್ತು. ಟ್ರಾಕ್ಟರಿನಲ್ಲಿ 50ಜನರ ಗುಂಪಿನೊಂದಿಗೆ ಡಪ್ಪಿನೊಂದಿಗೆ ಹಾಡು ಹಾಡಿ, ನಂತರ ಸಭೆಗಳನ್ನೂ ನಡೆಸಿ ಇಡೀ ಮತಕ್ಷೇತ್ರ ಪ್ರಚಾರ ಮಾಡಲಾಯಿತು.

ಪ್ರತಿ ಮನೆಗೂ ಭೇಟಿ ನೀಡಿ, ಪ್ರತಿಯೊಬ್ಬಮಲ್'ದಾರನಿಗೂ, ಮನೆಯಲ್ಲಿ ಇಡೀ ಜನರಿಗೂ ಪಕ್ಷದ ಕುರಿತು, ರೈತರ ಸಮಸ್ಯೆಗಳು ಬಂಡವಾಳಶಾಹಿ ಭೂಮಾಲಿಕ ಪಕ್ಷಗಳು ಬಗೆಹರಿಸಲಾರದ್ದು, ನಾಗರಿಕ ಸೌಲಭಗಳಾದ ರಸ್ತೆ, ಕುಡಿಯುವ ನೀರು ಶಾಲಾಕಟ್ಟಡ, ಸಮುದಾಯ ಭವನ ಇತ್ಯಾದಿ ಸಿಗದೆ ಇರುವುದು ತಿಳಿಸುವುದು.

ಪ್ರತಿ ಗಾಮ್ರಸ್ಥಿತಿಯ ಒಂದೊಂದು ಗುಂಪುಗಳನ್ನು ಮಾಡಿ ಸಮೀಪದ ಹಳ್ಳಿಗಳಿಗೆ ಭೇಟಿ ಕೊಟ್ಟು ಪ್ರಚಾರ ಕಾರ್ಯದಲ್ಲಿ ತೊಡಗಿತು.

ಇದಕ್ಕೆ ಜನತೆಯಿಂದಲೂ ತಕ್ಕ ಪ್ರತಿಕ್ರಿಯೆ ಬಂತು. ಗ್ರಾಮಗಳಲ್ಲಿ, ಬಹಿರಂಗ ಸಭೆಯಲ್ಲಿ ಪಕ್ಷದ ಮುಖಂಡರಿಗೂ ರೈತಸಂಘದ ಮುಖಂಡರಿಗೂ ಹಾರ ಹಾಕಿ ಸಿ. ಪಿ. ಐ.(ಎಂ) ಪಕ್ಷದ ಅಭ್ಯರ್ಥಿಗೆ ಓಟು ಕೊಡುವುದಾಗಿ ಘೋಷಿಸಿದರು.

ಇದೆಲ್ಲವನ್ನು ಸಹಿಸದೆ ಬೇರೆ ಜನತಾ ಮತ್ತು ಕಾಂಗ್ರೆಸ್ ಪಕ್ಷದ ಮುಖಂಡರು ಬೆದರಿಕೆ ಪ್ರಾರಂಭಿಸಿದರು. ಹಣ, ಹೆಂಡ ಕೊಡಲು ಪ್ರಾರಂಭಿಸಿದರು. ಪಕ್ಷದ ಕಚೇರಿ ತೆರೆದರೆ ಹಣ ಕೊಡುವುದಾಗಿ ಆಸೆ ಒಡ್ಡಿದರು. ಮೂರು ನಾಲ್ಕು ಹಳ್ಳಿಗಳಲ್ಲಿ ಅವರು ಯಶಸ್ವಿಯಾದರು ಹಲವೆಡೆ ಅವರಿಗೆ ಪ್ರತಿರೋಧ ಬಂತು.

ಹೊಲದಯಲ್ಲಿ ಮೇದೆತಿನ್ನಲು ಕಳ್ಳ ದನಗಳು ಬರುತ್ತವೆ ಎಚ್ಚರಿಕೆಯಿಂದ ನಮ್ಮ ನಮ್ಮ ಹೊಲ ಕಾಯಬೇಕೆಂದು ತಮ್ಮ ತಮ್ಮಲ್ಲಿಯೇ ಮಾತಾಡಿಕೊಳ್ಳುತ್ತಿದ್ದರು.

ನಾಲ್ಕು ಜನ ಹಿರಿಯರು ಚುನಾವಣೆ ಪ್ರಚಾರಕ್ಕೆ ಹೋಗುತ್ತಾರೆಂದು ಗೊತ್ತಾದ ಕೂಡಲೇ ಅವರನ್ನು ಹೇಗಾದರೂ ಮಾಡಿ ತಡೆಗಟ್ಟಬೇಕೆಂದು ನಾನಾ ಒತ್ತಡಗಳು ತಂದರು ಅವರ ಮುಂದೆ ಬೇರೆ ಪಕ್ಷದ ಎರಡು ಜೀಪುಗಳನ್ನು ತಂದು ನಿಲ್ಲಿಸಿದರು. ಅವರು ಅದಕ್ಕೆ ಒಪ್ಪದೆ ಇದ್ದದಕ್ಕಾಗಿ ಜಾತಿಯಿಂದ ಹೊರಗೆ ಇಡುವುದಾಗಿ ಹೇಳಿದರು. ಜಾತಿ ಹೆಸರೇಳಿ ಹೊಡೆಯುವುದಕ್ಕೆ ಪ್ರಯತ್ನ ಪಟ್ಟರು. ಹರಿಜನ ಓಣಿಗಳಲ್ಲಿ ಅದು ಸಾಧ್ಯವಾಗಲಿಲ್ಲ. ಜನಗಳ ನಡುವೆ ಜಗಳ ತರುವ ಪ್ರಯತ್ನಗಳನ್ನೂ ಕೂಡಾ ಜನತೆ ಯಶಸ್ವಿಯಾಗಿ ಮುರಿದಿದ್ದಾರೆ.

ಇಷ್ಟೆಲ್ಲಾ ಇದ್ದರೂ, ಚುನಾವಣೆಯ ರಾತ್ರಿ ಹಣ,ಹೆಂಡ ಚಲಾವಣೆ ಮಾಡಿ ಇಡೀ ವಾತಾವರಣ ತಣ್ಣಗೆ ಮಾಡಿದರು. ನಾಲ್ಕು ಹಳ್ಳಿಗಳಲ್ಲಿ ಮತದಾನ ನಡೆಯದಂತೆ ತಡೆಯುವ ಪ್ರಯತ್ನ ಮಾಡಲಾಯಿತು. ರಾತ್ರಿ ಮೂರು ಗಂಟೆಯವರೆಗೆ ಗುಂಪು ಸಭೆಗಳನ್ನು ನಡೆಸಿ ಪರಿಸ್ಥಿತಿಯನ್ನು ನಿಭಾಯಿಸಲಾಯಿತು. ಗ್ರಾಮ ಘಟಕಗಳು ಇರುವಲ್ಲಿ ಹೆಚ್ಚಿನ ಕಷ್ಟವಾಗಲಿಲ್ಲ. ಗ್ರಾಮ ಘಟಕಗಳು ಇಲ್ಲದಲ್ಲಿ ಸ್ವಲ್ಪ ಕಷ್ಟವಾಯಿತು.

ಮಾತನಾಡಲು ಕೂಡ ಭಯಪಡುವಂತಾಯಿತು

[4ನೇ ಪುಟದಿಂದ]

ನೀಡಬೇಕೆಂದು ಆಣೆ ಮಾಡಿಸಿಕೊಂಡರು ; ಇಲ್ಲವಾದರೆ ಊರಿನಿಂದ ಹೊರಹಾಕುವ, ಗುಡಿಸಲು ಕಿತ್ತಿ ಹಾಕುವ, ಕುಡಿಯುವ ನೀರು ನಿಲ್ಲಿಸುವ, ಸಾಲ ತಕ್ಷಣ ಹಿಂದಿರುಗಿಸಬೇಕೆಂದೆಲ್ಲಾ ಬೆದರಿಕೆ ಹಾಕಿದರು, ಮತದಾರರ ಎದೆಗಳಲ್ಲಿ ಭಯದ ಬೀಜ ಬಿತ್ತಿದರು.

ನಮ್ಮ ಬಹಿರಂಗ ಸಭೆಯ ವೇದಿಕೆಯ ಮೇಲೆ ಅವರ ಗೂಂಡಾಗಳು ಬಂದು ಮೈಕ್ ಕಸಿದುಕೊಂಡು ಸಭೆಯನ್ನು ಸಂಪೂರ್ಣವಾಗಿ ನಿಲ್ಲಿಸುವಂತೆ ಮಾಡಿದರು. ಜನ ನಮ್ಮನ್ನು ಮಾತನಾಡಿಸಲು ಕೂಡಾ ಭಯಪಡುವಂತಾಯಿತು. ಏನೇ ಆಗಲಿ ಎಂದು ಪೋಲೀಸ್ ಬಂದೋಬಸ್ತಿಗೆ ಅರ್ಜಿ ಸಲ್ಲಿಸಿ ಇನ್ನೊಂದು ಸಭೆ ನಡೆಸಿದೆವು. ಕಾಂ. ವೆಂಕಟೇಶ್, ಕಾಂ. ಜಂಬಯ್ಯ ನಾಯಕ್, ಕಾಂ. ಗುರುಶಾಂತ್‌ರವರ ಪ್ರತಿಯೊಂದು ಮಾತುಗಳು ಜನತೆಯಲ್ಲಿ ಧೈರ್ಯವನ್ನು ತುಂಬಿಕೊಟ್ಟವು, ಭಯವನ್ನು ತಿಳಿಗೊಳಿಸಿದವು. ಸಭೆ ಯಶಸ್ವಿಯಾಯ್ತು. ಕಾರ್ಯಕರ್ತರಲ್ಲಿ ಹೊಸ ಉತ್ಸಾಹ, ಹುರುಪು ಮೂಡಿಬಂದಿತು.

ಈ ಹೊಸ ವಾತಾವರಣವನ್ನು ಭ್ರಷ್ಟಗೊಳಿಸಲು ಜನತಾ ಪಕ್ಷದವರು ಹೊಂಚುಹಾಕಿದರು. ಕತ್ತಲ ರಾತ್ರಿ ಇಡೀ ಓಣಿಯ ತುಂಬಾ ಹೆಂಡ, ಸಾರಾಯಿಯ ಬುರುಗಿನ ವಾಸನೆ ತುಳುಕುತ್ತಿತ್ತು. ನಮ್ಮ ಕಾರ್ಯಕರ್ತರು ಇದನ್ನು ಹಂಚದಂತೆ ತಡೆಯಲು ಎರಡು ದಿನ-ರಾತ್ರಿ ಎಚ್ಚರದಿಂದ ಕಾರ್ಯ ನಿರ್ವಹಿಸಿದರು.

ಮತದಾನದ ದಿನ ನಮಗೆ ಓಟು ಹಾಕುತ್ತಾರೆ ಎಂದು ಕಂಡುಬಂದವರಿಗೆ ಇಲ್ಲ ಸಲ್ಲದ ತಡೆಗಳನ್ನೊಡ್ಡಿ ಮತದಾರರನ್ನು ಹಿಂದಕ್ಕೆ ಕಳಿಸಲು ಪ್ರಯತ್ನ ನಡೆಯಿತು. ಉದಾಹರಣೆಗೆ, ಪದ್ಮಾವತಿ ಮತ್ತು ಚಂದ್ರಮತಿ ಎಂಬ ಕೃಷಿ ಮಹಿಳೆಯರು ಓಟು ಹಾಕಲು ಬಂದಾಗ "ನಿಮಗೆ ಓಟಿನ ವಯಸ್ಸು ಬಂದಿಲ್ಲ" ಎಂದು "ಈ ಊರಿನವರಲ್ಲ" ಎಂದು ಜನತಾದ ಪೋಲಿಂಗ್ ಏಜೆಂಟ್ ಮೂರ್ಖತನದ ತಡೆಗಳನ್ನು ಒಡ್ಡಿದ. ಇವರಿಬ್ಬರೂ ಛಾಲೆಂಜ್ ಓಟನ್ನು ಹಾಕಿದರು. ಕಳ್ಳ ಓಟು ಹಾಕಿಸಲು ಕೂಡಾ ಪ್ರಯತ್ನಿಸಿ ಜನತಾದವರು ವಿಫಲರಾದರು.

ನಾನು ಚುನಾವಣಾ ಕಣಕ್ಕಿಳಿದಾಗ ನನಗೆ ಬಿಡಿಗಾಸು ಕೂಡಾ ಇರಲಿಲ್ಲ. ಸಂಗಾತಿಗಳು, ಬಡ ಕೃಷಿ ಕೂಲಿಕಾರ ಮಹಿಳೆಯರಲ್ಲಿ ಒಟ್ಟು 200ರೂ. ಸಂಗ್ರಹಿಸಿದೆವು. ನಮ್ಮ ನೀತಿ ಜನರ ಮನಸ್ಸನ್ನು ಗೆಲ್ಲುವುದು, ಅವರ ನೀತಿ ಜನರ ಮನವನ್ನು ಕೊಂಡುಕೊಳ್ಳುವುದು. ಕೊನೆಗೆ ನಮ್ಮ ಪಕ್ಷವು ಈ ಕ್ಷೇತ್ರದಲ್ಲಿ ಗೆದ್ದಿತು. 30 ಮತಗಳನ್ನು ಹೆಚ್ಚಿಗೆ ಪಡೆದು ಮಂಡಲ್ ಸದಸ್ಯನಾಗಿ ಆರಿಸಿ ಬಂದೆ. ಈ ಜಯ ನನಗೆ, ನಮ್ಮ ಕಾರ್ಯಕರ್ತರಿಗೆ ಕಾಂ. ವೆಂಕಟೇಶ್ ಎಂದಂತೆ ಶೋಷಕ ವರ್ಗ ತನ್ನ ಮೈಚಳಿ ಕಾಸಲು ನಿರ್ಮಿಸಿದ ಅಗ್ನಿ ವೃತ್ತವನ್ನು ಭೇದಿಸಿ ಬರುವ ಜನತೆಗೆ ಧೈರ್ಯವನ್ನು ಸಿ. ಪಿ. ಐ. [ಎಂ] ಮಾತ್ರ ಕೊಡಲು ಸಾಧ್ಯ, ಆ ಜರೂರಿನ ಕೆಲಸ ಮಾಡುವುದು ನಮ್ಮ ಜವಾಬ್ದಾರಿಯೆಂಬ ಅರಿವನ್ನೂ ಮೂಡಿಸಿದೆ. ○

ಜನರನ್ನು ಒಳಗೊಳ್ಳುವ ಜಿಲ್ಲಾ ಯೋಜನೆಗಳು

(4ನೇ ಪುಟದಿಂದ)

ಹೊರತು ಬದಲಾವಣೆಗಳಿರುವುದಿಲ್ಲ. ಇದೇ ರೀತಿ ಬ್ಲಾಕ್ ಯೋಜನೆಗಳನ್ನೂ ಜಿಲ್ಲೆಗೆ ಕಳಿಸಲಾಗುತ್ತದೆ.

ಜಿಲ್ಲಾ ಮತ್ತು ಬಾಕ್ಲ್ ಯೋಜನೆಗಳನ್ನು ತಯಾರಿಸುವ ಮೂಲಕ ಸಾರ್ವಜನಿಕ ಸಭೆ, ಚರ್ಚೆ ಇತ್ಯಾದಿಗಳ ಮೂಲಕ ಜನತಾ ಸಂಪರ್ಕ ಕಾರ್ಯಕ್ರಮ ಹಾಕಿಕೊಳ್ಳಲಾಗುತ್ತದೆ.

ಯೋಜನೆ ಜಾರಿ ಮಾಡುವ ರೀತಿಯೂ ಯೋಜನೆಯಲ್ಲಿ ಅಂತರ್ಗತವಾಗಿದೆ ಪಂಚಾಯತ್ ಮೂಲಕ ನಿಧಿ ಒದಗಿಸಿದ ಕಾರ್ಯಕ್ರಮಗಳನ್ನು ಅದೇ ಜಾರಿ ಮಾಡುತ್ತದೆ. ಇದೇ ರೀತಿ ಮುನಿಸಿಪಾಲಿಟಿಗಳೂ ಯೋಜನೆಯನ್ನು ಜಾರಿ ಮಾಡುತ್ತವೆ. ಉಳಿದವನ್ನು ಇಲಾಖೆಗಳು ಜಾರಿ ಮಾಡುತ್ತವೆ. ಕೆಲವು ಕಾರ್ಯಕ್ರಮಗಳನ್ನು ಇಲಾಖೆ ಮತ್ತು ಪಂಚಾಯತ್ ಜಂಟಿಯಾಗಿ ಜಾರಿಗೊಳಿಸುವ ಪ್ರಯೋಗ ಸಹ ಮಾಡಲಾಗುತ್ತಿದೆ.

ಯೋಜನೆಯ ಜಾರಿಯ ಪ್ರಗತಿಯನ್ನು ಜಿಲ್ಲಾ ಮತ್ತು ಬ್ಲಾಕ್ ಯೋಜನಾ ಸಮಿತಿಗಳು ಕಾಲಕಾಲಕ್ಕೆ ಮಾಡುತ್ತವೆ.

ಜನರಲ್ಲಿ ಯಾವುದೇ ಭ್ರಮೆ ಹುಟ್ಟಿಸುವುದು ಈ ಹೊಸ ವ್ಯವಸ್ಥೆಯ ಉದ್ದೇಶವಲ್ಲ. ತನ್ನ ಅಧಿಕಾರದ ಮಿತಿಯೊಳಗೆ ರಾಜ್ಯಸರ್ಕಾರ ನೀಡಬಹುದಾದ ಪರಿಹಾರವನ್ನು ಹೆಚ್ಚು ಸಂಯೋಜಿತವಾಗಿ ಹಾಗೂ ವಿಸ್ತೃತ ರೀತಿಯಲ್ಲಿ ಜನಸಾಮಾನ್ಯರನ್ನೂ ಒಳಗೊಂಡು ನೀಡುವುದಷ್ಟೇ ಇದರ ಉದ್ದೇಶ. ಈ ಸಮಸ್ತ ಪ್ರಕ್ರಿಯೆಯಲ್ಲಿ ಆರ್ಥಿಕತೆಯಲ್ಲಿನ ಪರಸ್ಪರ ವಿರುದ್ಧವಾದ ಮಿತಿಗಳನ್ನು ಜನ ಸ್ವಂತ ಅನುಭವದಿಂದಲೇ ಸ್ಪಷ್ಟವಾಗಿ ತಿಳಕೊಂಡು ಮುಂದೊಮ್ಮೆ ತಾವು ಇದನ್ನೂ ಮೀರಿ ನಿಲ್ಲಬೇಕಾಗಿದೆ ಎಂಬುದನ್ನು ಅರಿತುಕೊಳುತ್ತಾರೆ ಎಂಬೂದು ನಿಜ. ●

ವ್ಯಾಯಮ ಶಾಲೆಯ ವಾರ್ಷಿಕೋತ್ಸವ

ಮಂಗಳೂರಿನ ಕುತ್ತಾರುಪದವು ನಲ್ಲಿರುವ ಶ್ರೀ ವೀರಾಂಜನೇಯ ವ್ಯಾಯಾಮ ಶಾಲೆಯ ಮೂರನೇ ವಾರ್ಷಿಕ ಮಹಾಸಭೆ ಜನವರಿ 25 ರಂದು ಶ್ರೀ ಉಮೇಶ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. 1987-88ನೇ ಸಾಲಿಗೆ ನೂತನ ಪದಾಧಿಕಾರಿಗಳಾಗಿ ಕೆಳಕಂಡವರು ಚುನಾಯಿತರಾಗಿದ್ದಾರೆ.

ಶಿಕ್ಷಕರು: ಶ್ರೀ ವಿಠಲಾ ಶ್ರೀಯಾನ್

ಅಧ್ಯಕ್ಷರು: ಶ್ರೀ ಎಂ. ರಘು

ಉಪಾಧ್ಯಕ್ಷ: ಶ್ರೀ ಜಯಂತ ನಾಯ್ಕ

ಕಾರ್ಯದರ್ಶಿ: ಶ್ರೀ ಶಶೀಂದ್ರ ಕುತ್ಯಾನ್

ಜತೆಕಾರ್ಯದರ್ಶಿ: ಶ್ರೀ ಗಣೇಶ್ ಟೈಲರ್

ಕೋಶಾಧಿಕಾರಿ: ಶ್ರೀ ಕೆ. ಶ್ರೀನಿವಾಸ

ಅಲ್ಲದೆ 3ಮಂದಿ ಕ್ರೀಡಾ ಕಾರ್ಯದರ್ಶಿಗಳು ಆಯ್ಕೆಯಾಗಿದ್ದಾರೆ. ●

ಆಂಧ್ರ ನೆರೆ ಹಾವಳಿ ಸಿ. ಪಿ. ಐ. (ಎಂ) ಸಹಾಯ

ಕಳೆದ ವರ್ಷದ ಆಗಸ್ಟ್‌ನಲ್ಲಿ ಆಂಧ್ರ ಪ್ರದೇಶ ಭೀಕರ ನೆರಹಾವಳಿಗೆ ತುತ್ತಾಗಿತ್ತು. ಪಶ್ಚಿಮ ಗೋದಾವರಿ, ಪೂರ್ವ ಗೋದಾವರಿ, ಖಮ್ಮಮ್, ವಾರಂಗಲ್ ಮತ್ತು ಅದಿಲಾಬಾದ್ ಜಿಲ್ಲೆಗಳಲ್ಲಿ ಅಪಾರ ಹಾನಿ ಸಂಭವಿಸಿತು. ಪ್ರವಾಹ ಪೀಡಿತರ ನೆರವಿಗೆ ಕೂಡಲೇ ಧಾವಿಸಿದ ಸಿ.ಪಿ.ಐ. (ಎಂ) 4 ಲಕ್ಷದ 90 ಸಾವಿರ ರೂಪಾಯಿಗಳನ್ನು ಸಂಗ್ರಹಿಸಿ ನೊಂದವರಿಗೆ ಪರಿಹಾರ ಕ್ರಮಗಳನ್ನು ಕೈಗೊಂಡಿತು. ಅಲ್ಲದೆ ಇನ್ನೂರು ಕ್ವಿಂಟಾಲ್ ಅಕ್ಕಿ, 15 ಕ್ವಿಂಟಾಲ್ ಧಾನ್ಯಗಳು, ಹನ್ನೆರಡು ಸಾವಿರ ಬಟ್ಟೆಗಳು, ಒಂದು ಲಕ್ಷ ರೂಪಾಯಿ ಬೆಲೆಬಾಳುವ ಔಷಧಗಳನ್ನು ವೈದ್ಯರುಗಳಿಂದ ಸಂಗ್ರಹಿಸಿ ವಿನಿಯೋಗಿಸಿತು. ಹೊರ ರಾಜ್ಯಗಳಿಂದ ಸಹ 10 ಸಾವಿರ ರೂಪಾಯಿ ಕೊಡುಗೆಯಾಗಿ ಬಂದಿತ್ತು.

ಐವತ್ತು ವೈದ್ಯಗರುಳನ್ನೊಳಗೊಂಡ ಹನ್ನೊಂದು ವೈದ್ಯಕೀಯ ತಂಡಗಳು ಸುಮಾರು 10 ದಿನಗಳ ಕಾಲ ನೆರೆ ಪೀಡಿತರಿಗೆ ವೈದ್ಯಕೀಯ ಸೇವೆ ನೀಡಿತು. ಈ ತಂಡಗಳು ತೀರ ಒಳಪ್ರದೇಶಗಳ ಗ್ರಾಮಗಳಲ್ಲೂ ಸಂಚರಿಸಿತು.

ಪಶ್ಚಿಮ ಗೋದಾವರಿ ಜಿಲ್ಲೆಯಲ್ಲಿ ಸಿ. ಪಿ. ಐ. [ಎಂ] 7,764 ಕೆ. ಜಿ. ಅಕ್ಕಿ, 10,500 ಹಳೆಯ ಬಟ್ಟೆಗಳು, 12,714 ಸ್ಟೀಲ್ ತಟ್ಟೆ, ಲೋಟಗಳನ್ನು, ಸೀರೆಗಳನ್ನು, 79 ಗ್ರಾಮಗಳು 22,458 ಕುಟುಂಬಗಳಿಗೆ ಒದಗಿಸಿತು.

ಕಾರ್ಮಿಕ ವಿವಾದದಲ್ಲಿ ಪೋಲಿಸರ ಹಸ್ತಕ್ಷೇಪ
ಸಿ. ಐ. ಟಿ. ಯು. ನಿಂದ ಪ್ರತಿಭಟನೆ

ಬೆಂಗಳೂರು

ಕಾರ್ಮಿಕರ ವಿವಾದದಲ್ಲಿ ಪೋಲೀಸರ ಪ್ರವೇಶವನ್ನು ವಿರೋಧಿಸಿ ಬೆಂಗಳೂರಿನ ಸಿ. ಐ. ಟಿ. ಯು. ಸಮನ್ವಯ ಸಮಿತಿಯ ಆಶ್ರಯದಲ್ಲಿ ಒಂದು ಸಾವಿರ ಕಾರ್ಮಿಕರು ಮೆರವಣಿಗೆ ನಡೆಸಿದರು. ಮಹದೇವ ಪುರದಲ್ಲಿ ಬಹಿರಂಗ ಸಭೆ ನಡೆಯಿತು. ಜನತಾ ಸರಕಾರದಡಿಯಲ್ಲಿ ಕಾರ್ಮಿಕರು ನ್ಯಾಯಯುತ ಬೇಡಿಕೆಗಾಗಿ ಹೋರಾಟ ನಡೆಸಿದರೂ ಪೋಲೀಸರ ಕಿರುಕುಳ ಹೆಚ್ಚುತ್ತಿದೆ. ಕಾರ್ಮಿಕರನ್ನು ಘೋಷಣೆ ಕೂಗಲು ಬಿಡದೆ ಅವರ ಮೇಲೆ ದಂಡ, ವಿಧಿಸುವುದು, ಕಾರ್ಖಾನೆಗಳ ಮುಂದೆ ಟೆಂಟ್ ಹಾಕಲು ಬಿಡದೆ, ಕಾರ್ಖಾನೆಯಿಂದ ಯಂತ್ರ ಮುಂತಾದ ವಸ್ತುಗಳನ್ನು ಹೊರಗೆ ಸಾಗಿಸದಂತೆ ತಡೆಯುವ ಕಾರ್ಮಿಕರ ಹಕ್ಕನ್ನು ಕಸಿಯುವ ಕೃತ್ಯಗಳಲ್ಲಿ ಪೋಲೀಸರು ತೊಡಗಿದ್ದಾರೆ. ಇದನ್ನು ಪ್ರತಿಭಟಿಸಲು ಮೆರವಣಿಗೆ ಮತ್ತು ಬಹಿರಂಗ ಸಭೆಗಳನ್ನು ನಡೆಸಲಾಯಿತು.

ಸಿ. ಐ. ಟಿ. ಯು. ಸಮನ್ವಯ ಸಮಿತಿಯ ಸಂಚಾಲಕ ಕಾಂ. ಜಾನ್ ವಿನ್ಸೆಂಟ್ ಸಭೆಯನ್ನು ಸ್ವಾಗತಿಸಿದರು. ಕಾ. ಸಿ. ಕುಂಞ್‌ಪ್ಪನ್ ಅಧ್ಯಕ್ಷತೆ ವಹಿಸಿದ್ದರು. ಕಾ. ಎಸ್. ಸೂರ್ಯನಾರಾಯಣರಾವ್, ಕಾ. ವೆಂಕಟೇಶ ಗೌಡ, ಕಾ. ಟಿ. ಎಸ್, ಅನಂತರಾಂ ಕಾಂ. ಗೋಪಾಲಗೌಡ ಮುಂತಾದ ಸಿ. ಐ. ಟಿ. ಯು. ಮುಖಂಡರುಗಳು ಸಭೆಯನ್ನುದ್ದೇಶಿಸಿ ಮಾತನಾಡಿ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕಾರ್ಮಿಕ ವರ್ಗದ ಮೇಲೆ ನಡೆಯುವ ದಬ್ಬಾಳಿಕೆಯನ್ನು ದುಡಿಯುವ ವರ್ಗ ಐಕ್ಯತೆಯಿಂದ ಎದುರಿಸಿ ಹೋರಾಡಬೇಕೆಂದು ಕರೆ ನೀಡಿದರು. ●

ತಮಿಳುನಾಡು : ಮಹತ್ತ್ವದ ರಾಜಕೀಯ ಸಮ್ಮೇಳನ

ಸಿ.ಪಿ.ಐ(ಎಂ) ನ ರಾಜ್ಯ ಮಟ್ಟದ ರಾಜಕೀಯ ಸಮ್ಮೇಳನ ಜನವರಿ 31 ಮತ್ತು ಫೆಬ್ರವರಿ 1ರಂದು ಕೈಗಾರಿಕಾ ನಗರವಾದ ಕೊಯಮುತ್ತೂರಿನಲ್ಲಿ ಅದ್ಭುತ ಯಶಸ್ಸಿನಿಂದ ನಡೆಯಿತು. ಪಕ್ಷದ ನೂರಾರು ಕಾರ್ಯಕರ್ತರು ಸಮ್ಮೇಳನಕ್ಕೆ ನಡೆಸಿದ ಸಿದ್ಧತೆಗಳು ಇಡೀ ನಗರದ ಜನತೆಯಲ್ಲಿ ಹುಟ್ಟಿಸಿದ ಕುತೂಹಲ ಅಪೂರ್ವವಾಗಿತ್ತು. ಸಮ್ಮೇಳನ ನಡೆಯುವ ಮೈದಾನದಲ್ಲಿನ ಚಟುವಟಿಕೆಗಳು ಬಿರುಸಿನಿಂದ ಕೂಡಿದ್ದು ನಗರದ ಜನತೆ ಹೊಸತಾದುದೇನನ್ನೋ ನಿರೀಕ್ಷಿಸುವಂತೆ ಮಾಡಿತ್ತು. ಇಡೀ ನಗರ ಕೆಂಪು ಪತಾಕೆಗಳಿಂದ, ತೋರಣಗಳಿಂದ, ಪೋಸ್ಟರು, ಬ್ಯಾನರುಗಳಿಂದ ಅಲಂಕೃತಗೊಂಡಿತ್ತು. ರಾಜ್ಯದ ವಿವಿಧೆಡೆಗಳಿಂದ ಪ್ರವಾಹಸೋಪಾದಿಯಲ್ಲಿ ಬಂದ ಎಲ್ಲಾ ಜನ ವಿಭಾಗಗಳ ಪ್ರತಿನಿಧಿಗಳು ಸಮ್ಮೇಳನದಲ್ಲಿ ಉತ್ಸಾಹದಿಂದ ಭಾಗವಹಿಸಿದರು. ಸಮ್ಮೇಳನದಲ್ಲಿ ಭಾಗವಹಿಸಲು ಉತ್ಸಾಹಿತರಾದ ಜನಸಮೂಹ ಟಿಕೆಟ್ಟನ್ನು ಕೊಳ್ಳಲು ಮುನ್ನುಗ್ಗಿದ್ದರು ಟಿಕೆಟ್ ಮಾರಾಟಕ್ಕಾಗಿ ಕೌಂಟರುಗಳನ್ನೂ ತೆರೆಯ ಬೇಕಾಯಿತು.

ಸಿ.ಪಿ.ಐ. [ಎಂ]ನ ಪ್ರಧಾನ ಕಾರ್ಯದರ್ಶಿ ಕಾ|| ಇ.ಎಂ.ಎಸ್. ನಂಬೂದಿರಿಪಾದ್, ಕಾ||ಪಿ. ರಾಮಮೂರ್ತಿ ಪಕ್ಷದ ರಾಜ್ಯ ಕಾರ್ಯದರ್ಶಿ ಕಾ|| ಎ. ನಲ್ಲಶಿವನ್, ಪಕ್ಷದ ಮುಖಂಡರಾದ ಕಾ|| ಆರ್. ಉಮಾನಾಥ್, ಕೆ. ಮುತ್ತಯ್ಯ, ಎನ್. ಶಂಕರಯ್ಯ ಕೆ. ರಮಣಿ, ಪಿ.ಆರ್. ಪರಮೇಶ್ವರನ್, ವೀರಯ್ಯನ್ ವರದರಾಜನ್ ಮುಂತಾದವರು ಭಾಗವಹಿಸಿ ಮಾತನಾಡಿದರು.

ಕಾಂ. ನಲ್ಲಶಿವನ್ ಅವರು ಸಮ್ಮೇಳನದಲ್ಲಿ ಮಾತನಾಡುತ್ತಾ, ಜನತೆಯ ಸಮಸ್ಯೆಗಳನ್ನು ಬಗೆಹರಿಸಲು ಕಾಂಗ್ರೆಸ್ ಆಡಳಿತ ಸಂಪೂರ್ಣ ವಿಫಲವಾಗಿದೆಯೆಂದರು. ಸಮಸ್ಯೆಗಳಿಗೆ ಸರಿಯಾದ ಪರಿಹಾರವನ್ನು ಸೂಚಿಸಲು ಇತರ ರಾಜಕೀಯ ಪಕ್ಷಗಳು ವಿಫಲವಾಗಿರುವ ಸಂದರ್ಭದಲ್ಲಿ ಸಿ.ಪಿ.ಐ. [ಎಂ] ಕಾರ್ಯಸಾಧ್ಯವಾದ ಬದಲಿ ಮಾರ್ಗವನ್ನು ಜನತೆಯ ಮುಂದಿಡುತ್ತದೆಯೆಂದು ಹೆಮ್ಮೆಯಿಂದ ಹೇಳಿದರು.

ತಮಿಳುನಾಡಿನ ಹಳ್ಳಿ ಹಳ್ಳಿಗಳಿಗೂ ಪಕ್ಷದ ಚಳುವಳಿಗಳನ್ನು ಕೊಂಡೊಯ್ದು ಸಿ.ಪಿ ಐ.[ಎಂ] ಅನ್ನು ಶಕ್ತಿಯುತಗೊಳಿಸುತ್ತೇವೆಂದು ಕಾ|| ಪಿ. ರಾಮಮೂರ್ತಿ ಅವರು ಸಮ್ಮೇಳನದಲ್ಲಿ ನುಡಿದರು. ಅವರು ಪಕ್ಷದ ಕೆಂಬಾವುಟ ಬಾನಿಗೇರಿಸಿ ಸಮ್ಮೇಳನವನ್ನು ಉದ್ಘಾಟಿಸಿದರು. ಇಂಥ ಒಂದು ಅವಕಾಶ ನನಗೆ ಸಿಕ್ಕಿದ್ದು ನನ್ನ ಭಾಗ್ಯ ಎಂಬುದಾಗಿ ತಿಳಿಸಿದ ಅವರು ನಮ್ಮ ಪಕ್ಷದ ಚಳುವಳಿ ರಾಜ್ಯದಲ್ಲೂ ಮತ್ತು ದೇಶದಲ್ಲೂ ಹಾಗೂ ಜಗತ್ತಿನೆಲ್ಲೆಡೆಯೂ ಬಲಿಷ್ಟವಾಗಿ ಬೆಳೆದು ಬರುತ್ತಿದೆಯೆಂದರು.

ವಿದೇಶಿ ಬಂಡವಾಳಗಾರರ ಕೊಳ್ಳೆ, ಬಂಡವಾಳಶಾಹೀ ಭೂಮಾಲಿಕ ವರ್ಗದ ಸುಲಿಗೆ ಈ ದೇಶದ ಜನರನ್ನು ಹಿಂಡಿ ಹಿಪ್ಪೆ ಮಾಡುತ್ತಿದೆ. ಬೆಲೆಯೇರಿಕೆ, ಕರಭಾರ, ನಿರುದ್ಯೋಗ ಜನತೆಯ ಜೀವನವನ್ನು ನಾಶಮಾಡುತ್ತಿದೆ. ಇಂಥ ವಿಷಮ ಪರಿಸ್ಥಿತಿಯಲ್ಲಿ ಸಿ.ಪಿ.ಐ. [ಎಂ] ಸಮಸ್ಯೆಯ ಪರಿಹಾರಕ್ಕೆ ಬದಲಿ ಯೋಜನೆಯನ್ನು ಜನತೆಯ ಮುಂದಿರಿಸಿದೆ. ಈ ಧೋರಣೆಯ ಆಧಾರದಲ್ಲಿ ಹೊಸ ಸಮಾಜದ ನಿರ್ಮಾಣಕ್ಕೆ ಜನ ಸಮುದಾಯವನ್ನು ಅಣಿನೆರೆಸಿ ಹೋರಾಟ ನಡೆಸೋಣ ಎಂಬುದಾಗಿ ಕಾ||ಆರ್. ಉಮಾನಾಥ್ ಕರೆ ನೀಡಿದರು.

ಸಮ್ಮೇಳನದ ಕೊನೆಯ ದಿನ ಪಕ್ಷವು ಬೃಹತ್ ಮೆರವಣಿಗೆಯನ್ನು ಏರ್ಪಡಿಸಿತ್ತು. ಲಕ್ಷಾಂತರ ಜನರ ಈ ಮೆರವಣಿಗೆಯನ್ನು ನಗರದ ಜನತೆ ವಿಸ್ಮಯದಿಂದ ವೀಕ್ಷಿಸಿದರು. ಎರಡು ದಿನಗಳ ಕಾಲ ನಗರವನ್ನು ಕಲಕಿದ ಈ ರಾಜಕೀಯ ಸಮ್ಮೇಳನ ಹೊಸ ಹುಮ್ಮಸ್ಸನ್ನು ಸೃಷ್ಟಿಸಿ ಇತರ ರಾಜ್ಯಗಳ ಪಕ್ಷದ ಸಂಘಟನೆಗೆ ಒಂದು ಮಾದರಿಯನ್ನು ಹಾಕಿಕೊಟ್ಟಿದೆ.

ಮಹಾರಾಷ್ಟ್ರ : ಕೋಮು ಸೌಹಾರ್ದಕ್ಕೆ ಜಾಥಾ

ಕೋಮು ಸೌಹಾರ್ದವನ್ನು ಬಲಪಡಿಸುವ ಘೋಷಣೆಯೊಂದಿಗೆ ಇತ್ತೀಚಿಗೆ ಬೊಂಬಾಯಿಯಲ್ಲಿ ಬೃಹತ್ ಮೆರವಣಿಗೆ ನಡೆಯಿತು. ಎಲ್ಲಾ ಜನ ವಿಭಾಗಗಳಿಗೆ ಸೇರಿದ 25,000ಮಂದಿ ಮುಂಬೈ ನಗರದ ಮಧ್ಯಭಾಗದಿಂದ 7 ಕಿಲೋ ಮೀಟರ್ ದೂರದ ಮೆರವಣಿಗೆಯನ್ನು ನಡೆಸಿದರು. ಕೋಮು ಬಾಂಧವ್ಯಕ್ಕೆ ಸಂಬಂಧಿಸಿದ, ರಾಷ್ಟ್ರೀಯ ಏಕತೆಗೆ ಸಂಬಂಧಿಸಿದ ಘೋಷಣೆಗಳು ನಗರದ ತುಂಬಾ ಮಾರ್ದನಿಗೊಂಡವು. ಕಳೆದ ಅನೇಕ ವರ್ಷಗಳಿಂದೀಚೆಗೆ ನಡೆದ ಬೃಹತ್ ಮೆರವಣಿಗೆ ಇದಾಗಿತ್ತು. ಇ

ಕಾಂಗ್ರೆ, ಜನತಾ, ಸಿ.ಪಿ.ಐ.(ಎಂ) ಸಿ.ಪಿ.ಐ., ಆರ್.ಪಿ.ಐ., ಕಾಮಗಾರಿ ಅಗಾಧಿ, ದಲಿತ ಪ್ಯಾಂಥರ್, ಲಾಲ್ ನಿಶಾನ್ ಪಾರ್ಟಿ ಮುಂತಾದ ರಾಜಕೀಯ ಪಕ್ಷಗಳು ಮತ್ತು ಅವುಗಳ ಕಾರ್ಮಿಕ ಸಂಘಟನೆಗಳು ಸಂಯುಕ್ತವಾಗಿ ಈ ಮೆರವಣಿಗೆಗೆ ಕರೆ ನೀಡಿದ್ದವು.

ಕೋಮುವಾದೀ ಪಕ್ಷಗಳಾದ ಬಿ ಜೆ.ಪಿ., ಶಿವಸೇನೆ, ಮುಸ್ಲಿಂ ಲೀಗ್, ಮತ್ತಿತರ ಸಂಘಟನೆಗಳನ್ನು ದೂರ ಇಡಲಾಗಿತ್ತು. ಇತ್ತೀಚಿನ ದಿನಗಳಲ್ಲಿ ಮೊದಲ ಬಾರಿಗೆ ಕಾಂಗ್ರೆ ಮತ್ತು INTUC ಗಳು ವಿರೋಧ ಪಕ್ಷಗಳೊಂದಿಗೆ ಈ ಜಂಟೀ ಕಾರ್ಯಕ್ರಮದಲ್ಲಿ ಭಾಗವಹಿಸಿತ್ತು.

★ ದೇಶದೊಳಗೊಂದು ಸುತ್ತು ★

ಸೂಲಗಿತ್ತಿಯರ ಮೇಲೆ ಪೋಲೀಸರ ಆಕ್ರಮಣ

ಬಿಹಾರ :

ಗ್ರಾಮಗಳಲ್ಲಿ ನಡೆಸುವ ಪ್ರತಿ ಹೆರಿಗೆಗೂ 3 ರೂಪಾಯಿ ಮತ್ತು ಸಮುದಾಯ ಆರೋಗ್ಯ ಕೇಂದ್ರದ ಹುದ್ದೆಗೆ 50 ರೂಪಾಯಿ ಶುಲ್ಕ ಕೇಳಿ, ಬಿಹಾರದ ಸಾವಿರಾರು ಸೂಲಗಿತ್ತಿಯರು ನಡೆಸಿದ ಹೋರಾಟವನ್ನು ಕ್ರೂರವಾಗಿ ದಮನ ಮಾಡುತ್ತಿರುವ ಬಿಹಾರದ ಕುಖ್ಯಾತ ಪೋಲೀಸರು ಇದುವರೆಗೆ 5,000 ಸೂಲಗಿತ್ತಿಯರನ್ನು ಬಂಧಿಸಿ ಜೈಲಿಗೆಕಳಿಸಿದ್ದಾರೆ ಅಲ್ಲದೆ ಅವರ ಮೇಲೆ ಲಾಠಿ ಚಾರ್ಜು ನಡೆಸಿದ್ದಾರೆ, ಬಂದೂಕಿನಿಂದ, ಹಿಡಿಯಿಂದ ಹೊಡೆದು ಚಿತ್ರಹಿಂಸೆ ನಡೆಸುತ್ತಿದ್ದಾರೆ. ಈ ಹಿಂಸೆಯಲ್ಲಿ ಓರ್ವ ಮಹಿಳೆ ತೀವ್ರ ಗಾಯಗೊಂಡು ಸತ್ತಿದ್ದಾಳೆ. ಕನಿಷ್ಠ ಬೇಡಿಕೆಯನ್ನು ಮುಂದಿಟ್ಟು ಬಿಹಾರದ ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ ನೌಕರರ ಸಂಘ ದೀರ್ಘ ಕಾಲದಿಂದ ಚಳವಳಿ ನಡೆಸುತ್ತಿದೆ. ಸಿ. ಪಿ. ಐ. [ಎಂ]ನ ಪಾರ್ಲಿಮೆಂಟ್ ಸದಸ್ಯರಾದ ಕಾಂ. ಸುಕೋಮಲ್ ಸೇನ್ ಅವರ ನೇತೃತ್ವದಲ್ಲಿ ಆರೋಗ್ಯ ಖಾತೆಗೆ ನಿಯೋಗ ತೆರಳಿ ಮನವಿ ಅರ್ಪಿಸಲಾಗಿದೆ. ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ಕೊನೆಯ ಪ್ರಯತ್ನವಾಗಿ ಸೂಲಗಿತ್ತಿಯರು ಉಗ್ರ ಹೋರಾಟಕ್ಕಿಳಿದಿದ್ದಾರೆ.

ಅಖಿಲ ಭಾರತ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಕಾರ್ಯದರ್ಶಿ ಕಾಂ. ವಿಮಲ ರಣದಿವೆ ಮತ್ತು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಕಾರ್ಯದರ್ಶಿ ಕಾಂ. ರೀಟಾ ಕಾರತ್ ಅವರು ಪೋಲೀಸರ ಈ ಹೇಡಿತನದ ಆಕ್ರಮಣವನ್ನು ಕಟುವಾಗಿ ಖಂಡಿಸಿದ್ದಾರೆ. ಯಶಸ್ವೀ ಚಳವಳಿ ನಡೆಸುತ್ತಿರುವ ಸೂಲಗಿತ್ತಿಯರನ್ನು ಅಭಿನಂದಿಸಿರುವ ಅವರು ಮಹಿಳೆಯ ಸಾವಿಗೆ ಕಾರಣರಾದ ಪೋಲೀಸರಿಗೆ ಶಿಕ್ಷೆ ನೀಡಿ ಮಹಿಳೆಯ ಕುಟುಂಬಕ್ಕೆ ಪೂರ್ಣ ಪರಿಹಾರ ನೀಡಬೇಕೆಂದು ಒತ್ತಾಯಿಸಿದ್ದಾರೆ. ಸೂಲಗಿತ್ತಿಯರ ಬೇಡಿಕೆಗಳನ್ನು ಕೂಡಲೇ ಈಡೇರಿಸಬೇಕೆಂದು ಸರಕಾರವನ್ನು ಒತ್ತಾಯಿಸಿರುವ ಅವರು ಮಹಿಳೆಯರ ಹೋರಾಟಕ್ಕೆ ಬೆಂಬಲಿಸಬೇಕೆಂದು ಜನವಾದೀ ಸಾಮೂಹಿಕ ಸಂಘಟನೆಗಳಿಗೆ ಕರೆ ನೀಡಿದ್ದಾರೆ.

ಒಪ್ಪಂದದ ಉಲ್ಲಂಘನೆಗೆ ಯುವ ಜನರ ಆಕ್ರೋಶ

ಕೇರಳದ ಯುವಜನರು DYFI ನ ನೇತೃತ್ವದಲ್ಲಿ ಕಳೆದ ವರ್ಷದ ಆಗಸ್ಟ ಮತ್ತು ಸೆಪ್ಟಂಬರ್ ತಿಂಗಳುಗಳಲ್ಲಿ ತೀವ್ರವಾದ ಚಳುವಳಿಯನ್ನು ನಡೆಸಿದ್ದರು. ಅದರ ಪರಿಣಾಮವಾಗಿ ರಾಜ್ಯ ಸರ್ಕಾರ DYFI ನೊಂದಿಗೆ ಒಂದು ಒಪ್ಪಂದ ಮಾಡಿಕೊಳ್ಳ ಬೇಕಾಯಿತು. ಸರ್ಕಾರೀ ನೌಕರಿಗೆ ಲೋಕ ಸೇವಾ ಆಯೋಗದ ಮೂಲಕ ಮಾತ್ರ ಸೇರ್ಪಡೆ ನಡೆಯಬೇಕು, ನಿರುದ್ಯೋಗ ನಿವಾರಣಾ ಯೋಜನೆಯನ್ನು ಪೂರ್ಣವಾಗಿ ಜಾರಿಗೊಳಿಸಬೇಕು ಎಂಬುದೇ ಹೋರಾಟದ ಪ್ರಮುಖ ಬೇಡಿಕೆಯಾಗಿತ್ತು. ಆದರೆ ಸರ್ಕಾರ ತಮ್ಮೊಡನೆ ಮಾಡಿಕೊಂಡಿರುವ ಒಪ್ಪಂದವನ್ನು ಶೀಘ್ರವಾಗಿ ಜಾರಿಗೊಳಿಸಬೇಕೆಂದು ಒತ್ತಾಯಿಸಿ ಈಗ ರಾಜ್ಯದಾದ್ಯಂತ DYFI ತೀವ್ರ ಚಳುವಳಿಯನ್ನು ಆರಂಭಿಸಿದೆ. ಕರುಣಾಕರನ್ ಸರ್ಕಾರ ಒಪ್ಪಂದವನ್ನು ಜಾರಿಗೊಳಿಸುವಲ್ಲಿ ವಿಳಂಬ ತಂತ್ರ ಅನುಸರಿಸಿದೆ. ಇದನ್ನು ವಿರೋಧಿಸಿ ಫೆಬ್ರವರಿ 2ರಿಂದ DYFI ರಾಜ್ಯ ಮಟ್ಟದ ಚಳುವಳಿಯನ್ನು ನಡೆಸುತ್ತಿದೆ. ರಾಜ್ಯದ ಮಂತ್ರಿಗಳು ತಮ್ಮ ಕಾರ್ಯಕ್ರಮಗಳನ್ನು ರದ್ದುಗೊಳಿಸಿ, ಯುವ ಜನರ ಘೋರಾವೋದಿಂದ ಬಚಾವಾಗಲು ಪ್ರಯತ್ನಿಸಿದ್ದಾರೆ. ಸರ್ಕಾರೀ ಕಚೇರಿಗಳು, ಜಿಲ್ಲಾಧಿಕಾರಿಗಳ ಕಚೇರಿ, ಮತ್ತು ತಾಲ್ಲೂಕು ಕಚೇರಿಗಳ ಮುಂದೆ ಪಿಕೆಟಿಂಗ್, ಧರಣಿ ಮುಷ್ಕರಗಳು ನಡೆದಿವೆ.

ಕೋಳಿಕೋಡ್ ಜಿಲ್ಲೆಯಲ್ಲಿ ಹತ್ತು ಸಾವಿರಕ್ಕೂ ಮೇಲ್ಪಟ್ಟ ತರುಣ, ತರುಣಿಯರು ಸರ್ಕಾರೀ ಕಚೇರಿಗಳ ಎದುರು ಮತ ಪ್ರದರ್ಶನ ನಡೆಸಿದ್ದಾರೆ.

ಕಣ್ಣಾನೂರು ಜಿಲ್ಲೆಯ ಸಾವಿರಾರು DYFI ಕಾರ್ಯಕರ್ತರು ತಾಲ್ಲೂಕು ಕಚೇರಿ ಮತ್ತು ಜಿಲ್ಲಾ ಕಚೇರಿಗಳ ಎದುರು ಪ್ರತಿಭಟನಾ ಪ್ರದರ್ಶನ ನಡೆಸಿದರು.

ಕಾಸರಗೋಡಿನಲ್ಲಿ 5 ಸಾವಿರ ಯುವಜನರು ಚಳವಳಿಯಲ್ಲಿ ಭಾಗವಹಿಸಿದ್ದಾರೆ.

ಎರ್ನಾಕುಲಂ ಜಿಲ್ಲೆಯಲ್ಲಿ ಯುವ ಜನರ ಈ ಹೋರಾಟದಿಂದಾಗಿ ಏಳು ತಾಲ್ಲೂಕು ಕಚೇರಿಗಳ ಕೆಲಸ ಕಾರ್ಯಗಳು ಸ್ತಬ್ಧಗೊಂಡಿದ್ದವು.

ಒಪ್ಪಂದವನ್ನು ಮುರಿದು ಯುವ ಜನರಿಗೆ ದ್ರೋಹ ಮಾಡಲು ಪ್ರಯತ್ನಿಸುತ್ತಿರುವ ಕರುಣಾಕರನ್ ಸರ್ಕಾರಕ್ಕೆ ಯುವಜನರು ಸರಿಯಾದ ರೀತಿಯಲ್ಲಿ ಪಾಠ ಹೇಳಿಕೊಡುತ್ತಿದ್ದಾರೆ.

ಜಿಲ್ಲಾ ಪರಿಷತ್ ವ್ಯವಸ್ಥೆ : ಕರ್ನಾಟಕ - ಪ. ಬಂಗಾಳ

(2ನೇ ಪುಟದಿಂದ)

ಯುತ್ತವೆ ಮಾತ್ರವಲ್ಲ ಬೇರೆ ಯಾವುದೇ ರಾಜ್ಯದ ಕಾಮಗಾರಿಗಳಿಗಿಂತ ಕಡಿಮೆ ವೆಚ್ಚದಲ್ಲಿ-ಅರ್ಧದಷ್ಟು, ಮೂರನೇ ಒಂದು ಭಾಗದಷ್ಟು ವೆಚ್ಚದಲ್ಲಿ ಸಮರ್ಪಕವಾಗಿರುತ್ತವೆ. 'ಸಾಲಮೇಳ' ದ ಯೋಜನೆ ಐ.ಆರ್.ಡಿ.ಪಿ. ಯನ್ನು ಪಂಚಾಯ್ತಿ ವ್ಯವಸ್ಥೆ ಮೂಲಕ ಕಾರ್ಯಗತಗೊಳಿಸಿದುದರ ಬಗ್ಗೆ ಕೇಂದ್ರ ಸರ್ಕಾರದ ಯೋಜನಾ ಆಯೋಗವೇ ಹೊಗಳಬೇಕಾಗಿಬಂದಿತ್ತು. ಅದರ ಪ್ರಕಾರ ಬಡತನದ ರೇಖೆಯಿಂದ ಬಡಜನರನ್ನು ಮೇಲೆತ್ತುವಲ್ಲಿ ಇಡೀ ದೇಶದಲ್ಲಿಯೇ ಅತ್ಯಂತ ಮುಂದಿರುವ ಪಂಜಾಬ್ ನಂತರ ಪ.ಬಂಗಾಳವೇ. ಇಲ್ಲಿಯವರೆಗೂ ಯೋಜನಾ ವೆಚ್ಚದ ಮೂರನೇ ಒಂದು ಭಾಗ ಪೂರ್ತಿ ಈ ಪಂಚಾಯಿತಿ ವ್ಯವಸ್ಥೆಯ ಮೂಲಕ ಕಾರ್ಯಗತವಾಗುತ್ತಿತ್ತು. ಈಗ 86-87 ರಿಂದ ಇಡೀ ದೇಶದಲ್ಲಿಯೇ ನೂತನವಾದ ಒಂದು ಪ್ರಯೋಗವನ್ನು ಪ.ಬಂಗಾಳ ಸರ್ಕಾರ ಮಾಡಿದೆ. ಬ್ಲಾಕ್ ಲೆವೆಲ್ ಪ್ಲಾನಿಂಗ್, ತಾಲ್ಲೂಕು ಮಟ್ಟದಲ್ಲಿ ಯೋಜನೆಗಳ ತಯಾರಿ ಎಂದು ಈ ಪ್ರಯೋಗದ ಹೆಸರು. ಇದರ ಫಲವಾಗಿ ಪ್ರತಿಗ್ರಾಮದ ಜನರ ಅಭಿಪ್ರಾಯಗಳ ಸಂಗ್ರಹ ಮಾಡಿ ಅವರ ಬೇಕು ಬೇಡಗಳಿಗೆ ಗಮನ ನೀಡುವ ಪದ್ಧತಿ ಅದರ ಜೊತೆಗೆರಾಜ್ಯದ ಪಂಚವಾರ್ಷಿಕ ಯೋಜನೆಗಳ ಮೂರನೇ ಎರಡು ಭಾಗ ಹಣ ಈ ಜಿಲ್ಲಾಪರಿಷತ್ ವ್ಯವಸ್ಥೆಯ ಮೂಲಕ ಜಾರಿಗೆ ಬಂದಿದೆ. ಆದರೆ ಕಾಂಗ್ರೆಸ್ (ಐ) ರಾಜ್ಯಗಳಲ್ಲಿ ಭ್ರಷ್ಟಾಚಾರ, ಕಂಟ್ರಾಕ್ಟರ್ ಗಳ ಹಾವಳಿಗಳು ಇವಕ್ಕೆ ಮಿತಿಯಿದೆಯೇ ? ಗ್ರಾಮೀಣ ಬಡಜನರಿಗೆ ಅಧಿಕಾರವಿದೆಯೇ ?

ಈ ನಮ್ಮ ಜನತಾ ಸರ್ಕಾರದ ಜನತಾ ಪಕ್ಷದ ಮುಂದಿರುವ ಪ್ರಶ್ನೆ ಇಲ್ಲಿಯ ಜಿಲ್ಲಾ ಪರಿಷತ್ ವ್ಯವಸ್ಥೆ ಯಾವ ದಾರಿಯನ್ನು ಹಿಡಿಯಬೇಕು ? ಎಡರಂಗಕ್ಕೆ ಸುಭದ್ರ ನೆಲೆಯನ್ನು ಒದಗಿಸಿರುವ ಪ ಬಂಗಾಳದ ಮಾದರಿಯನ್ನೋ ? ಕಾಂಗ್ರೆ ರಾಜ್ಯಗಳಾದ ಮಹಾರಾಷ್ಟ್ರ, ಗುಜರಾತ್‌ಗಳ ಮಾದರಿಯನ್ನೋ ?

ಈಗಾಗಲೇ ಚುನಾವಣೆಗಳು ನಡೆದಿರುವ ರೀತಿಯಿಂದ, ಆಯ್ಕೆಯಾಗಿ ಬಂದಿರುವವರ ಆಸ್ತಿ ಪಾಸ್ತಿಗಳಿಂದಸ್ಪಷ್ಟವಾಗುವ ವಿಷಯವೆಂದರೆ ಪ ಬಂಗಾಲದ ದಾರಿಯನ್ನು ನಮ್ಮ ಜಿಲ್ಲಾ ಪರಿಷತ್ ಹಿಡಿಯುವ ಸಾಧ್ಯತೆಗಳಿಲ್ಲ ಎಂಬುದು. ಆದರೆ ಭೂ ಸುಧಾರಣೆಯನ್ನು ಇಲ್ಲಿ ಜಾರಿಗೆ ತರಲಾಗುವುದೇ ? ಇಲ್ಲಿನ ಗ್ರಾಮೀಣ ಪಟ್ಟಭದ್ರರ ಬೇರನ್ನು ಅಲುಗಾಡಿಸುವ ಪ್ರಯತ್ನ ನಡೆಯುವುದೇ? ಎಂಬ ಪ್ರಶ್ನೆಯ ಮೇಲೆ ಇದು ಅವಲಂಬಿಸಿದೆ. ಇಲ್ಲಿಯವರೆಗೂ ಇಂತಹ ಯಾವುದೇ ಸೂಚನೆಗಳು ಕಂಡಿಲ್ಲ.

ಆದರೂ ಈ ಜಿಲ್ಲಾ ಪರಿಷತ್ ವ್ಯವಸ್ಥೆಯಿಂದ ಪ್ರಜಾಸತ್ತಾತ್ಮಕ ಚಳುವಳಿಗೆ ಆಗುವ ಉಪಯೋಗ ಅಪಾರ. ಅದು ಗ್ರಾಮೀಣ ಶೋಷಕರ ಭೂಮಾಲಿಕರ ನಿಜಮುಖವನ್ನು ತನ್ನ ಎಲ್ಲಾ ಕರಾಳತೆಯೊಂದಿಗೆ ಜನತೆ ಮುಂದೆ ಒಡ್ಡುತ್ತದೆ.

ಸಿ. ಪಿ. ಐ. ವಕ್ತಾರರ ಸುಳ್ಳು ಪ್ರಚಾರ

(1ನೇ ಪುಟದಿಂದ)

ಸಿ.ಪಿ ಐ ವಕ್ತಾರರು "ತಾವು ಸಿಪಿಐ (ಎಂ) ಪಕ್ಷಕ್ಕೆ ಬರೆದರೂ, ರಾಜ್ಯದಾದ್ಯಂತ ಸ್ಥಾನ ಹೊಂದಾಣಿಕೆ ಮಾಡಿಕೊಳ್ಳಲು ಪ್ರಯತ್ನ ನಡೆಸಿದರೂ ಸಿ.ಪಿ.ಐ. [ಎಂ] ಮುಂದಾಳುಗಳು ಸ್ಪಂದಿಸಲಿಲ್ಲ" ಎಂದು ಕೊಟ್ಟ ಹೇಳಿಕೆಯನ್ನು ಸಿಪಿಐ[ಎಂ] ರಾಜ್ಯಸಮಿತಿ ಅಲ್ಲಗಳೆಯುತ್ತದೆ. ಅವರದು ಒಂದು ಅಸತ್ಯ ಹೇಳಿಕೆ. ಅವರಿಂದ ನಮಗೆ ಪತ್ರವೂ ಬಂದಿಲ್ಲ. ಸ್ಥಾನ ಹೊಂದಾಣಿಕೆಗೆ ಸೂಚನೆಯೂ ಬಂದಿಲ್ಲ. ನಾವು ಪತ್ರ ಹಾಕುವ ವೇಳೆಯಿಂದ ಹಿಡಿದು ನಾವು ಪತ್ರ ಹಿಂತೆಗೆಯುವ ತನಕ ಸಿಪಿಐ ಮುಂದಾಳುಗಳು ಎಐಟಿಯುಸಿ ಸಮ್ಮೇಳನದಲ್ಲಿ ಮುಳುಗಿದ್ದರು ಎಂದು ರಾಜ್ಯ ಸಮಿತಿ ಅಭಿಪ್ರಾಯ ಪಟ್ಟಿದೆ.

ಜಿಲ್ಲಾ ಪರಿಷತ್ - ಮಂಡಲ ಪಂಚಾಯತ್ ಉಪ ಪ್ರಧಾನ-ಪ್ರಧಾನರ ಚುನಾವಣೆ : ಚುನಾಯಿತ ಜಿಲ್ಲಾ ಪರಿಷತ್ ಮಂಡಲ ಪಂಚಾಯತಿಗಳಲ್ಲಿ ಪ್ರಧಾನ-ಉಪಪ್ರಧಾನರ ಚುನಾವಣೆ ನಡೆಯಲಿದ್ದು ಅವುಗಳಲ್ಲಿ "ನಮ್ಮವರು ಕಾಂಗ್ರೆಸ್[ಐ] ಮತ್ತು ಮತೀಯ ಪಕ್ಷಗಳಿಗೆ ಮತವೀಯ ಬಾರದು, ಜಿಲ್ಲಾ ಮಟ್ಟದಲ್ಲಿ ಜನತಾ ಪಕ್ಷದ ಜೊತೆ ಚರ್ಚಿಸಿ ಹೊಂದಾಣಿಕೆ ಮಾಡಿಕೊಳ್ಳಬಹುದು" ಎಂದು ಫೆಬ್ರುವರಿ 8-9ರಂದು ಸೇರಿದ ರಾಜ್ಯ ಸಮಿತಿ ನಿರ್ಣಯಿಸಿದೆ.

ಕೇರಳ ಚುನಾವಣೆ :

ಮುಂಬರುವ ಕೇರಳ ಚುನಾವಣೆಯಲ್ಲಿ ದಕ್ಷಿಣ ಕನ್ನಡದ ಸಮಿತಿ ಕಾಸರಗೋಡು-ಮಂಜೇಶ್ವರ ಪ್ರದೇಶದಲ್ಲಿ ಹಾಗೆಯೇ ಕೊಡಗು, ಮೈಸೂರು ಹಾಗೆಯೇ ಇಡೀ ಕರ್ನಾಟಕದ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ಎಡ ಪ್ರಜಾಪ್ರಭುತ್ವ ರಂಗಕ್ಕೆ ಬೆಂಬಲ ನೀಡಬೇಕೆಂದು ಪ್ರಚಾರಕ್ಕೆ ಬೇಕಾದ ಹಣ ಸಂಗ್ರಹ ಮಾಡಬೇಕೆಂದು ರಾಜ್ಯ ಸಮಿತಿ ನಿರ್ಧರಿಸಿದೆ.

'ಬರೇ ಪ್ರೇಕ್ಷಕನಾಗುಳಿಯಲು ಸಾಧ್ಯವಿಲ್ಲ' - ಬರ್ನಾಲ

[1ನೇ ಪುಟದಿಂದ]

ಶರಬತ್ ಖಾಲ್ಸಾ ಹುಕುಂನಾಮೆ "ಭಾರತದ ಐಕ್ಯತೆ ಮತ್ತು ಸಮಗ್ರತೆಯನ್ನು ಬಲಹೀನಗೊಳಿಸುವ ಏಜಂಟರಿಗೆ ಬೆಂಬಲ ನೀಡುತ್ತಿರುವ ವಿದೇಶಿ ಶಕ್ತಿಗಳ ಒಳಸಂಚು ಆಗಿದೆ. ಎಂದೂ, ಯಾವ ಸ್ಥಾನದಿಂದ ಅಂಥ ಘೋಷಣೆಯನ್ನು ಹೊರಡಿಸಿದರೂ ಕೂಡಾ, ಅವು ಪ್ರತ್ಯೇಕವಾದೀ ಹಾಗೂ ರಾಜದ್ರೋಹವಾಗಿರುವುದರಿಂದ ಅವುಗಳ ಕುರಿತು ಸರ್ಕಾರ ಬರೇ ಪ್ರೇಕ್ಷಕನಂತುಳಿಯಲು ಸಾಧ್ಯವಿಲ್ಲ"ಎಂದೂ ಹೇಳಿ ಬರ್ನಾಲ ಮಂತ್ರಿ ಮಂಡಲ ಹುಕುಮ್‌ನಾಮೆಯನ್ನು ಖಂಡಿಸಿದೆ. ಪ್ರತ್ಯೇಕತಾವಾದಿಗಳು ಯಾವ ವೇಷಧರಿಸಿ ಬಂದರೂಕೂಡಾ ಅದನ್ನು ಧೈರ್ಯದಿಂದ ಎದುರಿಸುತ್ತೇವೆಂಬ ನಿರ್ಣಯವನ್ನು ಅಂಗೀಕರಿಸಿದ ಅಕಾಲಿದಳಸಮಿತಿ ಬರ್ನಾಲಾ ಅವರ ಹೇಳಿಕೆಯನ್ನು ಸಮರ್ಥಿಸಿದೆ.

ಅಕಾಲಿದಳದ ಅಧ್ಯಕ್ಷ ಸ್ಥಾನದಿಂದಲೂ ಮುಖ್ಯಮಂತ್ರಿ ಪದದಿಂದಲೂ ಸುರ್ಜಿತ್ ಸಿಂಗ್ ಬರ್ನಾಲಾ ಅವರನ್ನು ಪದಚ್ಯುತಗೊಳಿಸಿ, ತಮ್ಮ ನೀಚ ಗುರಿ ಸಾಧನೆಗಾಗಿ ಪ್ರತ್ಯೇಕತಾವಾದಿ ಭಯೋತ್ಪಾದಕರ ಚಟುವಟಿಕೆಗಳಿಗೆ ಕುಮ್ಮಕ್ಕು ಕೊಟ್ಟು ಅವುಗಳನ್ನು ಇನ್ನೂ ಉಗ್ರಗೊಳಿಸುವ ಉದ್ದೇಶದಿಂದಲೇ ಆ ಹುಕುಮ್‌ನಾಮೆ ಹೊರಡಿಸಲಾಗಿದೆ.

ಅದು ಬಹಳ ಅಪಾಯಕಾರಿ ಧೋರಣೆ. ಅದಕ್ಕೆ ಯಶಸ್ಸು ಸಿಕ್ಕಿದ್ದಾದರೆ ದೇಶದ ಐಕ್ಯತೆಗೂ ಸಿಖ್ ಜನಾಂಗಕ್ಕೂ, ಪಂಜಾಬಿಗೂ ಅಪಾಯಕಾರಿ. ಪ್ರಮುಖ ರಾಜಕೀಯ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಅಕಾಲಿದಳದ ಚರಿತ್ರೆಯಲ್ಲಿ ಹಿಂದೆಂದೂ ಧಾರ್ಮಿಕ ಗುರುಗಳ ಅಧಿಕಾರವನ್ನು ಉಪಯೋಗಿಸಿರಲಿಲ್ಲ.

ದೇಶದ ಎಲ್ಲಾ ದೇಶಪ್ರೇಮಿ ಶಕ್ತಿಗಳೂ, ಮುಖ್ಯವಾಗಿ ಪ್ರಜಾಪ್ರಭುತ್ವವಾದಿ ಸಿಖ್ ಜನತೆ ಇಂಥ ಹೊಸ ಕುತಂತ್ರಗಳ ವಿರುದ್ಧ ಹೋರಾಡಬೇಕು, ಪ್ರತಿಭಟನೆ ವ್ಯಕ್ತ ಮಾಡಬೇಕೆಂದು ಪಾಲಿಟ್ ಬ್ಯುರೊ ಕೇಳಿಕೊಳ್ಳುತ್ತದೆ.

"ಧರ್ಮಾಧಿಕಾರಿಗಳ" ಕುಚೋದ್ಯತನಕ್ಕೆ ಮಣಿಯುವ ಪ್ರತ್ಯೇಕವಾದಿ, ಛಿದ್ರಕಾರಿಗಳ ವಿರುದ್ಧ ಹೋರಾಟದಲ್ಲಿ ರಾಷ್ಟ್ರದ ಐಕ್ಯತೆಗಾಗಿ ನಿರ್ದಿಷ್ಟವಾದ ಧೈರ್ಯದ ನಿಲುವು ತಾಳಬೇಕೆಂದು ಪಿ ಬಿ., ಅಕಾಲಿದಳ[ಲೊಂಗೋವಾಲ್] ಪಕ್ಷಕ್ಕೆ ಕೇಳಿಕೊಳ್ಳುತ್ತದೆ.

ಕೇಂದ್ರ ಸರಕಾರ ತನ್ನ ಈಗಿನ ಹಿಂಜರಿತದ ಧೋರಣೆಯನ್ನು ಬಿಟ್ಟುಕೊಟ್ಟು, ಜಾತ್ಯಾತೀತ ಶಕ್ತಿಗಳನ್ನೂ, ದೇಶದ ಐಕ್ಯತೆಯನ್ನು ಬಲಗೊಳಿಸಿ, ಸಾಮ್ರಾಜ್ಯಶಾಹಿಗಳನ್ನೂ ಅವರ ಏಜಂಟರನ್ನು ಸೋಲಿಸಲು ನಿಷ್ಠೆಯಿಂದ ಪಂಜಾಬ ಒಪ್ಪಂದವನ್ನು ಜಾರಿಯಲ್ಲಿ ತರುವುದರ ಮೂಲಕ ಪಂಜಾಬ ಸಮಸ್ಯೆಗೆ ರಾಜಕೀಯ ಪರಿಹಾರ ಕಂಡುಹಿಡಿಯಬೇಕೆಂದು ಪಿ.ಬಿ. ವಿನಂತಿಮಾಡಿಕೊಳ್ಳುತ್ತದೆ.

ಡಿ. ವೈ. ಎಫ್. ಐ. ರಾಷ್ಟ್ರೀಯ ಐಕ್ಯತೆ ಬಗ್ಗೆ ವಿಚಾರ ಸಂಕಿರಣ

ಜನವರಿ 2(ರಂದು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ [DYFI] ಧಾರವಾಡ ನಗರ ಘಟಕದವರು ಹತ್ತಿಕೊಳ್ಳದಲ್ಲಿರುವ ಇಂಡಿಯನ್ ಪ್ಲಾಯ್‌ಉಡ್ ಕಾರ್ಮಿಕ ಸಂಘದ ಹತ್ತಿರ ಗೂರ್ಖಾಲ್ಯಾಂಡ್ ಚಳುವಳಿ ಬಗ್ಗೆ ವಿಚಾರ ಸಂಕಿರಣ ಏರ್ಪಡಿಸಿದ್ದರು. ಬೆಳಿಗ್ಗೆ 9ಗಂಟೆಗೆ ಕಾಂ. ಎಂ.ಬಿ, ಕಟ್ಟಿ ಧ್ವಜಾರೋಹಣ ಮಾಡಿ ರಾಷ್ಟ್ರೀಯ ಐಕ್ಯತೆ ಬಗ್ಗೆ ಮಾತನಾಡುತ್ತಾ ಬಂಡವಾಳಶಾಹಿ ರಾಜಕೀಯ ಪಕ್ಷಗಳಿಗೆ ಅದರ ಸರಿಯಾದ ಕಲ್ಪನೆ ಇಲ್ಲ ರಾಷ್ಟ್ರೀಯ ಹಬ್ಬಗಳ ಮಹತ್ವವೂ ಗೊತ್ತಿಲ್ಲ ಎಂದರು. ನಂತರ ಕಾಂ. ಎಸ್.ಆರ್. ಪರಸಪ್ಪನವರ ಅವರು ವಿಚಾರ ಸಂಕಿರಣವನ್ನು ಉದ್ಘಾಟಿಸಿದರು ಕಾಂ ಪ್ರಕಾಶ ಉಡಿಕೇರಿ, ಮೋಹನರಾಯರೆಡ್ಡಿ ಅವರು ಮಾತನಾಡುತ್ತಾ ಗೂರ್ಖಾಲ್ಯಾಂಡ್ ಚಳುವಳಿ ರಾಷ್ಟ್ರವಿರೋಧಿ ಚಳುವಳಿ ಅದನ್ನು ನಾವಿಂದು ವಿರೋಧಿಸಬೇಕಾಗಿದೆ. ಅದರ ಬಗ್ಗೆ ವ್ಯಾಪಕ ಪ್ರಚಾರದ ಅವಶ್ಯಕತೆ ಇದೆ ಎಂದರು. ನಂತರ ನಗರ ಸಮಿತಿ ಸಂಚಾಲಕ ಕೃಷ್ಣ ಕಟ್ಟಿ ಅವರು ವಂದನಾರ್ಪಣೆ ಮಾಡಿದರು. ಸಂಜೆ ನಗರದ 3ಸ್ಥಳಗಳಲ್ಲಿ ಬೀದಿ ಭಾಷಣಗಳನ್ನು ಮಾಡಿ ಗೂರ್ಖಾಲ್ಯಾಂಡ್ ಚಳುವಳಿ ರಾಷ್ಟ್ರವಿರೋಧಿ ಎಂದು ಜನರಿಗೆ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಲಾಯ್ತು. ಬೀದಿ ಭಾಷಣಗಳಲ್ಲಿ ಕಾಂ.ಸಾದಿಕ್ ಸೌದಾಗರ್, ಪಾರ್ವತಿ ಕೌಲ್, ಕೃಷ್ಣ ಕಟ್ಟಿ ಮಾತನಾಡಿದರು.

ಯಶಸ್ವೀ ಡಿ. ವೈ. ಎಫ್. ಐ. ಅಧ್ಯಯನ ಶಿಬಿರ

ಫೆ. 6-8ರಿಂದ ಮೂರು ದಿನಗಳು ರಾಜ್ಯ ಮಟ್ಟದ ಡಿ.ವೈ.ಎಫ್.ಐ. ಅಧ್ಯಯನ ಶಿಬಿರ ನಡೆಯಿತು. ಆಯ್ಕೆ ಮಾಡಿದ ಐವತ್ತೊಂದು ಸಂಗಾತಿಗಳು ಭಾಗವಹಿಸಿದ್ದರು.

ಸಿ.ಪಿ.ಐ.[ಎಂ] ರಾಜ್ಯ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರ ರಾವ್, ಸಿ.ಐ.ಟಿ.ಯು. ಪ್ರಧಾನ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪ, ಸಿ.ಐ.ಟಿ.ಯು. ರಾಜ್ಯ ಕಾರ್ಯದರ್ಶಿ ಕಾಂ .ವಿ. ಜೆ.ಕೆ. ನಾಯರ್, ಕಾಂ. ಜಿ.ಎನ್. ನಾಗರಾಜ್, ಸಿ.ಪಿ.ಐ.(ಎಂ.) ರಾಜ್ಯ ಕಾರ್ಯಕಾರಿ ಸದಸ್ಯ ಕಾಂ. ಎನ್.ಕೆ. ಉಪಾಧ್ಯಾಯ ಇವರುಗಳು ಉಪನ್ಯಾಸ ನೀಡಿದರು.

ಶಿಭಿರಾರ್ಥಿಗಳಲ್ಲಿ ಉದ್ಯೋಗಿಗಳು 14, ನಿರುದ್ಯೋಗಿಗಳು 37 ಇದ್ದರು. ರಾಜ್ಯ ಸಮಿತಿಯವರು 11, ಜಿಲ್ಲಾ ಸಮಿತಿಯವರು 18, ತಾಲ್ಲೂಕು ಸಮಿತಿಯವರು 9, ಇತರರು 13 ಇದ್ದರು.

ರಾಜ್ಯ ಸಮಿತಿಯ ಅಧ್ಯಕ್ಷರಾದ ಕಾಂ. ಮಹಾಬಲ ವಡೇರ ಹೋಬ್ಳಿ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಕಾರ್ಯದರ್ಶಿ ಕಾಂ. ಎಸ್. ಶಿವರಾಂ ಅವರು ಸ್ವಾಗತಿಸುತ್ತ ಸಂಕ್ಷಿಪ್ತವಾಗಿ ಡಿ.ವೈ.ಎಫ್.ಐ ಉದ್ದೇಶ, ಈ ವರ್ಷದ ಮುಖ್ಯ ಕಾರ್ಯಕ್ರಮಗಳ ಬಗ್ಗೆ ಹೇಳಿದರು ರಾಜ್ಯ ಉಪಾಧ್ಯಕ್ಷ ಕಾಂ. ಕೆ.ವಿ. ಸತ್ಯನಾರಾಯಣ ರವರು ಸಭೆಯನ್ನು ಉದ್ದೇಶಿಸಿ ಕೊನೆಯಲ್ಲಿ ಕಾಂ. ಪಿ. ರಾಮಚಂದ್ರ ರಾವ್‌ರವರು ಮಾತನಾಡಿದರು. ಸಮಾರೊಪ ಭಾಷಣ ಮಾಡಿದರು.

ಅಲ್ಲಲ್ಲಿ ಏನೇನು?

ಎಂಬ ಹೊಸ ಕಾಲಂ ಆರಂಭವಾಗಲಿದೆ. ಮುಂದಿನ ವಾರ ನಡೆಯಲಿರುವ ಕಾರ್ಯಕ್ರಮಗಳನ್ನು ಎಲ್ಲರಿಗೂ ತಿಳಿಸುವ ಕಾಲಂ ಇದು. ರಾಜ್ಯಮಟ್ಟದ, ಜಿಲ್ಲಾಮಟ್ಟದ ಪಕ್ಷ ಸಮಿತಿಗಳ ಸಾಮೂಹಿಕ ಸಂಘಟನೆಗಳ ಸಭೆ, ಹಾಗೂ ಇತರ ಕಾರ್ಯಕ್ರಮಗಳನ್ನು ಒಂದು ವಾರ ಮೊದಲೇ ಕಳುಹಿಸಬೇಕಾಗಿ ವಿನಂತಿ.

ವ್ಯವಸ್ಥಾಪಕರು

ಈ ವಾರ....

ರಾಷ್ಟ್ರೀಯ ಜವಳಿ ನಿಗಮ (ಎನ್.ಟಿ.ಸಿ.) ದ ಎಂಟು ಗಿರಣಿಗಳನ್ನು ಸದ್ಯದಲ್ಲೇ ಮುಚ್ಚುವ ನಿರ್ಧಾರವನ್ನು ಕೇಂದ್ರ ಮಂತ್ರಿ ಮಂಡಲ ಕೈಗೊಂಡಿದೆ. ಬೆಂಗಳೂರಿನ "ಮೈಸೂರು ಸ್ಪಿನ್ನಿಂಗ್ ಅಂಡ್ ವೀವಿಂಗ್ ಮಿಲ್"ಕೂಡಾ ಇದರಲ್ಲಿ ಸೇರಿದೆ. ಒಟ್ಟು 18,000 ಖಾಯಂ ಕಾರ್ಮಿಕರು ಹಾಗೂ ಅಗಾಧ ಸಂಖ್ಯೆಯ 'ಬದಲೀ' ಕಾರ್ಮಿಕರು ಇದರಿಂದ ತೊಂದರೆಗೊಳಗಾಗುತ್ತಾರೆ.

— ಯು. ಎನ್. ಐ. ಸುದ್ದಿ, ಫೆ. 9.

ವಾಸ್ತವವಾಗಿ ಖಾಸಗೀ ಶಿಕ್ಷಣ ಸಂಸ್ಥೆಗಳ ಸ್ಥಾಪನೆಯ ಅಡಿಪಾಯದಲ್ಲಿಯೇ ಭ್ರಷ್ಟಾಚಾರದ ಬೀಜಗಳು ಸೇರಿ ಹೋಗಿವೆ.

— ಪ್ರಜಾವಾಣಿ ಫೆ.9

ತೃತೀಯ ಜಗತ್ತಿನಲ್ಲಿ ಕೈಗಾರಿಕೀಕರಣ ನಡೆಯುವಾಗ ಬಹುರಾಷ್ಟ್ರೀಯ ಕಂಪೆನಿಗಳು ಹೆಚ್ಚು ಕಾರ್ಮಿಕರ ಅಗತ್ಯವಿರುವ ತಮ್ಮ ಉತ್ಪಾದನಾ ಘಟಕಗಳಿಗೆ ಹೊಸ ಹಾಗೂ ಅಗ್ಗದ ಜಾಗ ಹುಡುಕುವುದರಲ್ಲಿ ಮಹಿಳೆಯರ ಶ್ರಮ ಅವುಗಳಿಗೆ ಒಂದು ಪ್ರಮುಖ ಮೂಲವಾಗಿ ಮೂಡಿ ಬಂದಿವೆ..... ಈ ದೇಶಗಳಲ್ಲಿನ ಬಹುಪಾಲು ಮಹಿಳಾ ಕಾರ್ಮಿಕರು ಕೆಲಸಮಾಡುವ ಪರಿಸ್ಥಿತಿಗಳು ಹೇಗಿವೆಯೆಂದರೆ ಅವರ ಮಾನಸಿಕ ಆರೋಗ್ಯ ಕೂಡಾ ಕುಸಿದು ಬಿದ್ದಿದೆ ಅಥವಾ ಕುಸಿದು ಬೀಳುತ್ತದೆ.

—"ಭಾರತೀಯ ಸಂಖ್ಯಾ ಶಾಸ್ತ್ರ ಸಂಸ್ಥೆ"ಯ ಒಂದು ಅಧ್ಯಯನ

ಪಶ್ಚಿಮ ಬಂಗಾಳದಲ್ಲಿ ಫೆಬ್ರವರಿ ತಿಂಗಳಲ್ಲೇ ಚುನಾವಣೆ ನಡೆಯಲಿ ಎಂದು ಅಲ್ಲಿನ ಮುಖ್ಯಮಂತ್ರಿ ಜ್ಯೋತಿ ಬಸು ಆಶಿಸಿದ್ದರು. 'ಆಡಳಿತ ದೃಷ್ಟಿಯಿಂದ ಎಲ್ಲ ಚುನಾವಣೆಗಳು ಒಟ್ಟಿಗೆ ನಡೆದರೆ ಅನುಕೂಲ' ಎಂದು ಚುನಾವಣಾ ಆಯೋಗ ಪಶ್ಚಿಮ ಬಂಗಾಳದ ಬೇಡಿಕೆಯನ್ನು ತಳ್ಳಿ ಹಾಕಿತ್ತು.... ಪಶ್ಚಿಮ ಬಂಗಾಳಕ್ಕೆ ಅನ್ವಯಿಸಿದ ಮಾತು ಹರಿಯಾಣಕ್ಕೆ ಮಾತ್ರ ಅನ್ವಯವಾಗಿಲ್ಲ.! — ಪ್ರಜಾವಾಣಿ, ಫೆ. 10

ಅಣು ಶಕ್ತಿ ಆಯೋಗದ ಅಧ್ಯಕ್ಷರ ನೇಮಕದಲ್ಲಿ ಸರ್ಕಾರದ ಗೊಂದಲಮಯ ವರ್ತನೆ ನಿಂದನೀಯ.ವಾದರೆ, ಸಂಬಂಧ ಪಟ್ಟ ವಿಜ್ಞಾನಿಗಳು ತಾವು ಹೇಗೆ ಈ ಗೊಂದಲ ತಮ್ಮ ಕಾಣಿಕೆಯನ್ನು ಸೇರಿಸುವುದನ್ನು ತಪ್ಪಿಸಬಹುದು ಎಂದು ತಮ್ಮನ್ನೇ ಕೇಳಿಕೊಳ್ಳಬೇಕು. ವೈಜ್ಞಾನಿಕ ಸಂಸ್ಥೆಗಳು ಇಡೀ ರಾಷ್ಟ್ರದ ಆಸ್ತಿಗಳು ಅವುಗಳಿಂದ ನಿರೀಕ್ಷಿಸುವುದು ಸಮೂಹ ಕಾರ್ಯ ಹಾಗೂ ಫಲಿತಾಂಶ.

ಇಂಡಿಯನ್ ಎಕ್ಸ್‌ಪ್ರೆಸ್ ಫೆ.11

ಹೆಗಡೆಯವರ ಅದೃಷ್ಟ. ನಮ್ಮ ದೇಶದಲ್ಲಿಯೇ ಅತ್ಯುತ್ತಮ ಮುಖ್ಯಮಂತ್ರಿಯೆಂದು ಪರಿಗಣಿಸಬಹುದಾದ ಮತ್ತು ಒಬ್ಬ ಅತ್ಯುತ್ತಮ ಪ್ರಧಾನ ಮಂತ್ರಿಯಾಗಬಲ್ಲ ಜ್ಯೋತಿ ಬಸು ಕಮ್ಯುನಿಸ್ಟ್ ಆಗಿರುವುದರಿಂದ ಈ ವ್ಯವಸ್ಥೆಯಲ್ಲಿ ರಾಷ್ಟ್ರನಾಯಕನಾಗಲು ಸಾಧ್ಯವೇ ಇಲ್ಲ.

"ಲಂಕೇಶ ಪತ್ರಿಕೆ" ಯಲ್ಲಿ ಬಂದ ಲೇಖನ ಫೆ.15

ಐಕ್ಯರಂಗಕ್ಕೆ

ಚಂದಾದಾರರಾಗಿರಿ

ವಾರ್ಷಿಕ ಚಂದಾ	50 ರೂ
ಅರ್ಧ ವಾರ್ಷಿಕ ಚಂದಾ	25 ರೂ

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053
Editorial and Managerial Office : L-56, K. V. Temple Street,
Sultanpet B-53 Phone : 75331
Editor P. Ramachandra Rao
Managing Editor : N.K. Upadhyaya